ವಿಜಯಪುರ | ಸಂಪುಟ 04 | ಸಂಚಿಕೆ 36 | ಪುಟ 4 | ₹ 3.00

https://udayarashminews.com

udayarashmi 90088 88340

# ಉದಯ ರಶ್ಮಿ

Udayarashmi Kannada Daily

ಜನಪರ-ಜೀವಪರ

ಕನ್ನಡ ದಿನಪತ್ರಿಕೆ

ಸಂಪಾದಕ : ಇಂದುಶೇಖರ ಮಣೂರ    Editor: Indushekhar Manur

editor.udayarashmi@gmail.com    RNI NO: KARKAN/2023/86203    ಶುಕ್ರವಾರ, ಮಾರ್ಚ್, 27, 2026



"ಕಳೆದ ಲೋಕಸಭೆ ಚುನಾವಣೆಯಲ್ಲಿ ಪ್ರಭಾ ಮಲ್ಲಿಕಾರ್ಜುನ್ ಅವರಿಗೆ ಟಿಕೆಟ್ ನೀಡಲು ನಾವೇ ಒತ್ತಾಯ ಮಾಡಿದ್ದೆವು. ಅವರು ಕೇಳದಿದ್ದರೂ, ನಾವು ಬಲವಂತವಾಗಿ ಅವರನ್ನು ಚುನಾವಣೆಗೆ ನಿಲ್ಲಿಸಿದ್ದೇವೆ. ಗೆದ್ದು ಪ್ರಭಾ ಮಲ್ಲಿಕಾರ್ಜುನ್ ಅವರು ಸಂಸತ್ತಿನಲ್ಲಿ ಉತ್ತಮವಾಗಿ ಕೆಲಸ ಮಾಡುತ್ತಿದ್ದಾರೆ."

■ ಡಿ.ಕೆ.ಶಿವಕುಮಾರ್
ಉಪ ಮುಖ್ಯಮಂತ್ರಿ

### ವಿಜಯಪುರದಲ್ಲಿ ಜನಗಣತಿ ಕುರಿತು ಪೂರ್ವಭಾವಿ ಸಭೆಯಲ್ಲಿ ಜಿಲ್ಲಾಧಿಕಾರಿ ಡಾ.ಆನಂದ ಕೆ.

## ಜನಗಣತಿ ಸಿಬ್ಬಂದಿ ತರಬೇತಿ ಸದುಪಯೋಗ ಪಡೆದುಕೊಳ್ಳಬೇಕು

■ ಉದಯರಶ್ಮಿ ದಿನಪತ್ರಿಕೆ



ವಿಜಯಪುರ: ಜಿಲ್ಲೆಯಲ್ಲಿ ಕೈಗೊಳ್ಳಲಾಗುತ್ತಿರುವ ಭಾರತ ಜನಗಣತಿ 2027ರ ಕಾರ್ಯಕ್ಕೆ ನಿಯೋಜಿಸುವ ಸಿಬ್ಬಂದಿಗಳಿಗೆ ಸೂಕ್ತ ತರಬೇತಿ ನೀಡಿ ನಿಯೋಜಿಸಬೇಕು ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ. ಹೇಳಿದರು.

ಗುರುವಾರ ಜಿಲ್ಲಾಧಿಕಾರಿಗಳ ಕಚೇರಿ ಸಭಾಂಗಣದಲ್ಲಿ ಭಾರತ ಜನಗಣತಿ 2027ರ ಜನಗಣತಿ ಕುರಿತು ಪೂರ್ವಭಾವಿ ಸಿದ್ದತೆ ಹಾಗೂ ತರಬೇತುದಾರರಿಗೆ ವಿಡಿಯೋ ಸಂವಾದ ಮೂಲಕ ಮಾತನಾಡಿದ ಅವರು ಗಣತಿ ಕಾರ್ಯಕ್ಕೆ ನಿಯೋಜಿಸಿದ ಸಿಬ್ಬಂದಿಗಳು ಕಾಲ ಕಾಲಕ್ಕೆ ನೀಡುವ ತರಬೇತಿಯ ಪ್ರಯೋಜನೆ ಪಡೆದುಕೊಂಡು ಗಣತಿ ಕಾರ್ಯವನ್ನು ಯಾವುದೇ ಲೋಪ, ದೋಷಗಳಾಗದಂತೆ ಕಾರ್ಯ ನಿರ್ವಹಿಸಬೇಕು. ಮೊದಲನೆ ಹಂತವಾಗಿ ಏಪ್ರೀಲ್ 1ರಿಂದ 15ರ ವರೆಗೆ ಸ್ವಯಂ ಗಣತಿ ಕಾರ್ಯ ನಡೆಯಲಿದ್ದು, ಏಪ್ರೀಲ್ 16ರಿಂದ ಮೇ 15ರ ವರೆಗೆ ಮನೆ ಪಟ್ಟಿ ಕ್ಷೇತ್ರ ಕಾರ್ಯ ಕೈಗೊಳ್ಳಲಾಗುವುದು. ಫೆಬ್ರವರಿ 2027ರಿಂದ ಜನಗಣತಿ ಕಾರ್ಯ ನಡೆಯಲಿದೆ ಎಂದರು.

ಜಿಲ್ಲೆಯ ಎಲ್ಲ ನಗರ ಮತ್ತು ಸ್ಥಳೀಯ ಸಂಸ್ಥೆಗಳ ವ್ಯಾಪ್ತಿಯಲ್ಲಿ ಬರುವ ಪ್ರದೇಶಗಳಲ್ಲಿ ವಾಸಿಸುತ್ತಿರುವ ಬಾಡಿಗೆಗೆ ಇರುವ ಕುಟುಂಬಗಳು ಒಳಗೊಂಡಂತೆ, ಎಲ್ಲ ಮನೆಗಳು, ತೋಟದ ವಸ್ತಿ, ಸ್ಲಂ, ಎಲ್ಲ ಕುಟುಂಬಗಳ ಮನೆ ಪಟ್ಟಿ ಕಾರ್ಯ ಕೈಗೊಳ್ಳಬೇಕು. ಜನಗಣತಿಯಿಂದ ಯಾವುದೇ ಕುಟುಂಬ ಕೈಬಿಟ್ಟು ಹೋಗದಂತೆ ಅತಿ ಎಚ್ಚರಿಕೆಯಿಂದ ಜನಗಣತಿ ಕಾರ್ಯ ನಿರ್ವಹಿಸಬೇಕು. 50 ಗಣತಿದಾರರ ಸಿಬ್ಬಂದಿಗಳಿಗೆ ಗುಂಪು ಮಾಡಿ ತರಬೇತಿ ನೀಡಬೇಕು. ತರಬೇತಿಗೆ ನಿಯೋಜಿಸುವ ಸಿಬ್ಬಂದಿಗಳಿಗೆ 2 ರಿಂದ 3 ಬಾರಿಗೆ ತರಬೇತಿ ನೀಡಿ ಪೂರ್ಣ ಪ್ರಮಾಣದ ತಿಳುವಳಿಕೆ ಹೊಂದುವಂತೆ ತರಬೇತಿ ನೀಡಬೇಕು. ಈ ಕಾರ್ಯದಲ್ಲಿ ಮುಖ್ಯವಾಗಿ ಒಂದು ವಾರ್ಡಿನಲ್ಲಿ ಮತ್ತೊಂದು ವಾರ್ಡ್ ವಿಲೀನವಾಗದಂತೆ ಬ್ಲಾಕುಗಳನ್ನು ರಚಿಸಿ ಅಂತಿಮಗೊಳಿಸಬೇಕು. ಒಂದು ವೇಳೆ ಅಂತಿಮಗೊಳಿಸದೆ ಮುಂದಿನ ಪ್ರಕ್ರಿಯೆ ಹೋಗಲು ಬರುವುದಿಲ್ಲ. ಆದುದರಿಂದ ಅಂತಿಮಗೊಳಿಸುವ ಮುಂಚೆ ಕುಲಂಕುಷವಾಗಿ ಪರಿಶೀಲಿಸಬೇಕು. ಜಿಲ್ಲೆಯ ಎಲ್ಲ ನಗರ ಮತ್ತು ಸ್ಥಳೀಯ ಸಂಸ್ಥೆಗಳಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ಕಚೇರಿಗಳಿಗೆ ವರ್ಕಿಂಗ್ ಮ್ಯಾಪ್ ಸರಬರಾಜು ಮಾಡಬೇಕು. ತಹಶೀಲ್ದಾರರು ಹಾಗೂ ಮುಖ್ಯಾಧಿಕಾರಿಗಳು ಶೀಘ್ರವಾಗಿ ತರಬೇತಿಯನ್ನು ನೀಡಿಬೇಕು. ಮನೆ ಪಟ್ಟಿ ಕ್ಷೇತ್ರ ಕಾರ್ಯ ಒಂದು ತಿಂಗಳ ಕಾಲ ನಡಯಲಿದ್ದು ಯಾರು ನಿರ್ಲಕ್ಷ ಮಾಡದೆ ಈ ಕಾರ್ಯವನ್ನು ಪೂರ್ಣಗೊಳಿಸಿ ಎಂದು ಕಟ್ಟುನಿಟ್ಟಾಗಿ ಸೂಚಿಸಿದರು.

ಸಭೆಯಲ್ಲಿ ಅಪರ ಜಿಲ್ಲಾಧಿಕಾರಿ ಡಾ.ಔದ್ರಾಮ, ಮಹಾನಗರ ಪಾಲಿಕೆ ಆಯುಕ್ತರಾದ ವಿಜಯ ಮೆಕ್ಕಳಕಿ, ಇಂಡಿ ತಹಶೀಲ್ದಾರರಾದ ಬಿ.ಎಸ್ ಕಡಕಬಾವಿ, ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರಾದ ವೀರಯ್ಯ ಸಾಲಿಮಠ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕರಾದ ಬದ್ರುದ್ದೀನ ಸೌದಾಗರ, ಎಲ್ಲ ತಾಲೂಕಿನ ತಹಶೀಲ್ದಾರರು, ಮುಖ್ಯಾಧಿಕಾರಿಗಳು ಹಾಗೂ ಇತರರು ಉಪಸ್ಥಿತರಿದ್ದರು.

### ದಾವಣಗೆರೆ ದಕ್ಷಿಣ – ಬಾಗಲಕೋಟೆ ಉಪಚುನಾವಣೆ ಗೆಲ್ಲುವುದು ಕಾಂಗ್ರೆಸ್ ಪಕ್ಷಕ್ಕೆ ಅನಿವಾರ್ಯ। ನಾಯಕರಿಗೆ ಸುರ್ಜೇವಾಲಾ ಟಾರ್ಗೆಟ್!

## ಶಾಸಕಾಂಗ ಸಭೆಯಲ್ಲಿ 'ಕೈ' ಮುಖಂಡರ ರಣತಂತ್ರ



ಬೆಂಗಳೂರು: ಈ ಹಿಂದೆ ಕಾಂಗ್ರೆಸ್ ಶಾಸಕಾಂಗ ಸಭೆಯಲ್ಲಿ ಸಾಮಾನ್ಯವಾಗಿ ವಿಧಾನಸಭೆ ಮತ್ತು ವಿಧಾನ ಪರಿಷತ್ ಅಧಿವೇಶನದಲ್ಲಿ ವಿರೋಧ ಪಕ್ಷಗಳನ್ನು ಹೇಗೆ ನಿಯಂತ್ರಿಸಬೇಕು ಎಂಬ ಬಗ್ಗೆ ಚರ್ಚೆ ನಡೆಸಲಾಗುತ್ತಿತ್ತು, ಆದರೆ ಬುಧವಾರ ನಡೆದ ಶಾಸಕಾಂಗ ಸಭೆ ವಿಭಿನ್ನವಾಗಿತ್ತು.

ಕ್ಯಾಪಿಟಲ್ ಹೋಟೆಲ್‌ನಲ್ಲಿ ನಡೆದ ಸಭೆಯಲ್ಲಿ ಉಪ ಚುನಾವಣೆ ಬಗ್ಗೆ ಚರ್ಚಿಸಲಾಯಿತು, ಕಾಂಗ್ರೆಸ್ ನಾಯಕರ ಚರ್ಚೆ ಹೋಟೆಲ್ ಕೊಠಡಿಯನ್ನು ವಾರ್ ರೂಂ ಆಗಿ ಬದಲಾಯಿಸಿತ್ತು. ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು ಸಭೆಯನ್ನು ಉಪ ಚುನಾವಣೆಯಲ್ಲಿ ಹೇಗೆ ಸಮರೋಪಾದಿಯಲ್ಲಿ ಕೆಲಸ ಮಾಡಬೇಕು ಎಂದು ಹೇಳುವ ಮೂಲಕ ಪ್ರಾರಂಭಿಸಿದರು. ಎನ್‌ಡಿಎ (ಬಿಜೆಪಿ-ಜೆಡಿ-ಎಸ್) ವಿರುದ್ಧ "ಒಗ್ಗಟ್ಟಾಗಿ" ಹೋರಾಡಬೇಕು ಇಲ್ಲದಿದ್ದರೇ ಕ್ಷೇತ್ರಗಳನ್ನು ಕಳೆದುಕೊಳ್ಳುವ ಅಪಾಯವಿದೆ ಎಂದು ಎಚ್ಚರಿಕೆ ನೀಡಿದರು.

ನಾವು ಹಿಂದಿನ ಮೂರು ಉಪಚುನಾವಣೆಗಳನ್ನು ಗೆದ್ದಿದ್ದೇವೆ ಮತ್ತು ಈ ಎರಡೂ ಉಪಚುನಾವಣೆಗಳನ್ನು ಗೆಲ್ಲಲೇಬೇಕು ಎಂದು ಸುರ್ಜೇವಾಲಾ ಸೂಚಿಸಿದ್ದಾರೆ ಎಂದು ಪಕ್ಷದ ಮೂಲಗಳು ತಿಳಿಸಿವೆ. ಎಲ್ಲವನ್ನೂ ಬಿಟ್ಟು ಬಾಗಲಕೋಟೆ ಮತ್ತು ದಾವಣಗೆರೆ ದಕ್ಷಿಣ-ಕ್ಕೆ ಹೋಗಲು ಯಾರು ಸಿದ್ಧರಿದ್ದಾರೆ ಎಂದು ಸುರ್ಜೇವಾಲಾ ಶಾಸಕರ ಬಳಿ ಕೇಳಿದಾಗ ಬಹುತೇಕ ಎಲ್ಲರೂ ಕೈ ಎತ್ತಿದರು. ಸರಿ ಹಾಗಾದರೆ ನೀವೆಲ್ಲರೂ ಸ್ವಯಂ ಪ್ರೇರಣೆಯಿಂದ ಕೆಲಸ ಮಾಡಿ ಎಂದು ಕರೆ ನೀಡಿದ್ದಾರೆ.

### ಬಾಗಲಕೋಟೆ: ಸೋತರೆ ಕಾಂಗ್ರೆಸ್ ಗೆ ಮುಖಭಂಗ



2018 ರಲ್ಲಿ ಚಾಮುಂಡೇಶ್ವರಿ ಸೋಲಿನ ನಂತರ ಬಾಗಲಕೋಟೆ ಜಿಲ್ಲೆಯ ಬಾದಾಮಿ ಕ್ಷೇತ್ರದಿಂದ ಸಿಎಂ ಗೆಲ್ಲಲು ಸಹಾಯ ಮಾಡಿದ್ದರಿಂದ, ಬಾಗಲಕೋಟೆಯಲ್ಲಿ ಕಾಂಗ್ರೆಸ್ ಪಕ್ಷವನ್ನು ಸೋಲಿಸಲು ಬಿಜೆಪಿ ಪಣತೊಟ್ಟಿದೆ. ಎಚ್‌ವೈ ಮೇಟಿ ಗೌರವಾನ್ವಿತ ಕುರುಬ ನಾಯಕರಾಗಿದ್ದರು ಮತ್ತು ಈ ಸ್ಥಾನವನ್ನು ಕಳೆದುಕೊಂಡರೆ ಕಾಂಗ್ರೆಸ್ ಪಕ್ಷಕ್ಕೆ ಮುಖಭಂಗವಾಗುವುದು ಖಚಿತ. ಬಾಗಲಕೋಟೆಯಲ್ಲಿ ಬಿಜೆಪಿ ಪ್ರಬಲ ಪ್ರದರ್ಶನ ನೀಡುತ್ತಿರುವಂತೆ ತೋರುತ್ತಿದೆ .ಏಕೆಂದರೆ ಅಲ್ಲಿ ಕಾಂಗ್ರೆಸ್ ಲೆಕ್ಕಾಚಾರಗಳನ್ನು ತಲೆಕೆಳಗು ಮಾಡುವ ಹೋರಾಟದ ಅವಕಾಶವಿದೆ.

### ಬಾಗಲಕೋಟೆ ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ವಿಶ್ವಾಸ

## ಕಾಂಗ್ರೆಸ್ ಅಭ್ಯರ್ಥಿಗೆ 25 ಸಾವಿರ ಮತಗಳ ಅಂತರದ ಗೆಲುವು ಖಚಿತ

■ ಉದಯರಶ್ಮಿ ದಿನಪತ್ರಿಕೆ



ಜಮಖಂಡಿ: ಬಾಗಲಕೋಟೆ ಉಪ ಚುನಾವಣೆಯಲ್ಲಿ ಜನರ ಅಭೂತಪೂರ್ವ ಉತ್ಸಾಹ ನೋಡಿದರೆ ಕಾಂಗ್ರೆಸ್ ಅಭ್ಯರ್ಥಿ 25 ಸಾವಿರಕ್ಕೂ ಅಧಿಕ ಮತಗಳ ಅಂತರದಿಂದ ಭರ್ಜರಿ ಗೆಲುವು ಸಾಧಿಸುವುದು ಸೂರ್ಯ ಚಂದ್ರರಿರುವಷ್ಟೆ ಸತ್ಯ ಎಂದು ಜಿಲ್ಲಾ ಉಸ್ತುವಾರಿ ಸಚಿವ ಆರ್.ಬಿ. ತಿಮ್ಮಾಪೂರ ವಿಶ್ವಾಸ ವ್ಯಕ್ತಪಡಿಸಿದರು.

ನಗರದ ಕಾಂಗ್ರೆಸ್ ಮುಖಂಡ ಡಾ. ತೌಫಿಕ್ ಪಾರ್ಥನಳ್ಳಿ ಅವರ ನಿವಾಸದಲ್ಲಿ ಸುದ್ದಿಗಾರರ ಜೋತೆ ಅವರು ಮಾತನಾಡಿದರು.

ಬಿಜೆಪಿಯ ಹಿಂದುತ್ವ ಕಠಿಣವಾಗಿ ಟೀಕಿಸಿದ ಸಚಿವರು, ಅಜೆಂಡಾವನ್ನು ಬಿಜೆಪಿಯವರು ಮಾತ್ರ ಹಿಂದೂಗಳಾ? ನಾವೆಲ್ಲ ಯಾರು? ನಾವೂ ಹಿಂದೂಗಳೇ. ಆದರೆ ನಮ್ಮದು ಬಸವಣ್ಣನವರ ತತ್ವದ, ಪರಮಹಂಸರ, ಸ್ವಾಮಿ ವಿವೇಕಾನಂದರ ತತ್ವದ ಹಿಂದುತ್ವ, ಕುವೆಂಪು ಅವರು ಹೇಳಿದಂತೆ ಸರ್ವ ಜನಾಂಗದ ಶಾಂತಿಯ ತೋಟವಾಗಿ ಸಂವಿಧಾನದ ಅಡಿಯಲ್ಲಿ ಎಲ್ಲ ಜಾತಿ-ಧರ್ಮದವರು ಅಣ್ಣ-ತಮ್ಮಂದಿರಂತೆ ಬದುಕುವುದು ನಮ್ಮ ಹಿಂದುತ್ವವಾಗಿದೆ. ದಲಿತರು, ಹಿಂದುಳಿದವರು ಹಿಂದೂಗಳಲ್ಲವೇ? ಹಿಂದುತ್ವ ಎಂಬುದು ಯಾರೊಬ್ಬರ ಖಾಸಗಿ ಆಸ್ತಿಯಲ್ಲ, ಅದು ನಮ್ಮೆಲ್ಲರ ಆಸ್ತಿ ಎಂದು ಗುಡುಗಿದರು.

ಕೇಂದ್ರ ಸರ್ಕಾರದ ನೀತಿಗಳನ್ನು ಟೀಕಿಸಿದ ಅವರು, ಅಂಬಾನಿ, ಅದಾನಿಗಳಿಗೆ ರೈಲ್ವೆ ಮತ್ತು ವಿಮಾನ ನಿಲ್ದಾಣಗಳನ್ನು ಮಾರಿಕೊಂಡವರಿಂದ ನಾವೇನು ನಿರೀಕ್ಷಿಸಲು ಸಾಧ್ಯ? ಸಾಮಾನ್ಯ ಮನುಷ್ಯ ಸ್ವಾಭಿಮಾನದಿಂದ ಆರ್ಥಿಕವಾಗಿ ಅಭಿವೃದ್ಧಿಯಾಗುವುದೇ ನಿಜವಾದ ದೇಶದ ಅಭಿವೃದ್ಧಿ. ಇಂದು ಮತದಾರರ ಒಲವು ಸಂಪೂರ್ಣವಾಗಿ ಕಾಂಗ್ರೆಸ್ ಪರವಾಗಿದೆ ಎಂದರು. ಆಲಮಟ್ಟಿ ಜಲಾಶಯದ ವಿಚಾರವಾಗಿ ಮಾತನಾಡುತ್ತಾ, ಗೆಜೆಟ್ ಅಧಿಸೂಚನೆ ಹೊರಡಿಸುವ ಯೋಗ್ಯತೆ ಇಲ್ಲದವರು ನಮ್ಮನ್ನು ಟೀಕಿಸುತ್ತಿದ್ದಾರೆ. ಗೆಜೆಟ್ ಆಗದಿದ್ದರೂ ನಾವು ರೈತರಿಗೆ 30 ರಿಂದ 40 ಲಕ್ಷ ರೂ.ಗಳವರೆಗೆ ಪರಿಹಾರ ನೀಡುತ್ತಿದ್ದೇವೆ. ಸುಳ್ಳು ಹೇಳುವುದನ್ನೇ ಕಾಯಕ ಮಾಡಿಕೊಂಡಿರುವ ಬಿಜೆಪಿಯವರಿಗೆ ಆಲಮಟ್ಟಿ ಬಗ್ಗೆ ಮಾತನಾಡುವ ನೈತಿಕತೆ ಇಲ್ಲ ಎಂದು ಟೀಕಿಸಿದರು. ಇದೇ ಸಂದರ್ಭದಲ್ಲಿ ಯಯಿಹಾ ಪಾರ್ಥನಳ್ಳಿ, ಕಾಂಗ್ರೆಸ್ ಮುಖಂಡ ಅಬುಬಕರ್ ಕುಡಚಿ ಅವರ ಹುಟ್ಟುಹಬ್ಬದ ಅಂಗವಾಗಿ ಕೇಕ್ ಕತ್ತರಿಸಿ ಶುಭಹಾರೈಸಿದರು.

ಅಂಜುಮನ್ ಸಮಿತಿ ಅಧ್ಯಕ್ಷ ಡಾ. ತೌಫಿಕ್ ಪಾರ್ಥನಳ್ಳಿ, ಅಪ್ಪಾಸಾಬ ಮನಗೂಳಿ, ಬಿ.ಜಿ. ಪಾಟೀಲ, ರಾಜೇಸಾಬ ಸೌದಾಗರ, ಅಬೂಬಕರ್ ಕುಡಚಿ, ಹಣಮಂತ ತೇಲಿ, ಜಬ್ಬಾರ್ ಮುಂಡೂಗನೂರ, ಅಶೋಕ ಹಲ್ಯಾಳ, ಲಕ್ಷ್ಮಣ ಮುಚ್ಚಂಡಿ, ಸತ್ಯಪ್ಪ ಚನಾಳ, ವೆಂಕಟೇಶ ಗುಡೆಪ್ಪನವರ, ಅಮೋಘ ಮೌರ್ಯ ಸೇರಿದಂತೆ ಹಲವರಿದ್ದರು.



## ಸೇವೆ ಎಂಬುದು ಕೇವಲ ಕರ್ತವ್ಯವಲ್ಲ, ಅದು ಸಂಸ್ಕಾರ: ಸತೀಶ್ ಪಾಟೀಲ್

■ ಉದಯರಶ್ಮಿ ದಿನಪತ್ರಿಕೆ

ಬೀದರ್: ಸೇವೆ ಮಾಡುವುದು ಕೇವಲ ಕರ್ತವ್ಯವಲ್ಲ, ಅದು ನಮ್ಮ ಸಂಸ್ಕಾರ". ವಿದ್ಯಾರ್ಥಿ ದೆಸೆಯಲ್ಲಿ ನಾವು ಮಾಡುವ ಈ ಚಿಕ್ಕ ಚಿಕ್ಕ ಸೇವೆಗಳು ಮುಂದೊಂದು ದಿನ ನಮ್ಮನ್ನು ಒಬ್ಬ ಜವಾಬ್ದಾರಿಯುತ ಪ್ರಜೆಯನ್ನಾಗಿ ರೂಪಿಸುತ್ತವೆ ಎಂದು ಕರ್ನಾಟಕ ರಾಷ್ಟ್ರೀಯ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಸತೀಶ್ ಪಾಟೀಲ್ ಅವರು ತಿಳಿಸಿದರು. ಕರ್ನಾಟಕ ಕಲಾ, ವಿಜ್ಞಾನ ಹಾಗೂ ವಾಣಿಜ್ಯ ಮಹಾವಿದ್ಯಾಲಯ ವತಿಯಿಂದ ತಾಲೂಕಿನ ಗಾದಗಿ ಗ್ರಾಮದಲ್ಲಿ ಹಮ್ಮಿಕೊಂಡ ರಾಷ್ಟ್ರೀಯ ಸೇವಾ ಯೋಜನೆ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ನಾವೆಲ್ಲರೂ ಸೇರಿ ನಮ್ಮ ಸಮಾಜದ ಏಳಿಗೆಗಾಗಿ ಮತ್ತು ಸದೃಢ ಭಾರತದ ನಿರ್ಮಾಣಕ್ಕಾಗಿ ಶ್ರಮಿಸೋಣ ಎಂದರು.

ಎಪಿಎಂಸಿ ಮಾಜಿ ಅಧ್ಯಕ್ಷ ವಿಜಯಕುಮಾರ್ ಆನಂದೆ ಅವರು ಮಾತನಾಡಿ, ರಾಷ್ಟ್ರೀಯ ಸೇವಾ ಯೋಜನೆ ವಿದ್ಯಾರ್ಥಿಗಳಲ್ಲಿ ಸೇವಾ ಮನೋಭಾವನೆ ಬೆಳೆಸುತ್ತದೆ. ವಿನಯದಿಂದ ಬದುಕಲು ಕಲಿಸುತ್ತದೆ. ದೇಶಭಕ್ತಿ ಮೂಡಿಸುವುದರ ಜೊತೆಗೆ ಬದುಕುವ ಕಲೆಯನ್ನು ಕಲಿಸುತ್ತದೆ ಎಂದರು. ಇದೇ ವೇಳೆ ಸಂಸ್ಥೆ ಜಂಟಿ ಕಾರ್ಯದರ್ಶಿ ಶಿವಾನಂದ್ ಗಾದಗೆ, ವಿದ್ಯಾರ್ಥಿಗಳಿಗೆ ಎನ್‌ಎಸ್‌ಎಸ್ ಕುರಿತು ಧ್ಯೇಯವಾಕ್ಯ ಕುರಿತು ವಿವರವಾಗಿ ವಿದ್ಯಾರ್ಥಿಗಳಿಗೆ ಮನಮುಟ್ಟುವಂತೆ ತಿಳಿಸಿದರು.

### ಬಿರುಗಾಳಿಗೆ ಧರೆಗುರುಳಿದ ದ್ರಾಕ್ಷಿ ಪಡದ ಸಾಲುಗಳು । ಮಳೆಗೆ ತೊಯ್ದ ಒಣದ್ರಾಕ್ಷಿ । ಸಂಕಷ್ಟದಲ್ಲಿ ರೈತರು

# ಬಿರುಗಾಳಿ – ವರುಣನ ಅರ್ಭಟಕ್ಕೆ ನಲುಗಿದ ದ್ರಾಕ್ಷಿ ಬೆಳೆಗಾರರು

■ ಉದಯರಶ್ಮಿ ದಿನಪತ್ರಿಕೆ

ತಿಕೋಟಾ: ದ್ರಾಕ್ಷಿ ಪಡದಲ್ಲಿನ ಹಣ್ಣಿಗೆ ಬಂದ ದ್ರಾಕ್ಷಿ ಕಟಾವು ಮಾಡಬೇಕೆನ್ನುವಷ್ಟರಲ್ಲೆ ಬಾರಿ ಬಿರುಗಾಳಿಗೆ ಸಹಿತ ಮಳೆಗೆ ದ್ರಾಕ್ಷಿ ಸಾಲುಗಳು ಧರೆಗುರುಳಿವೆ. ಯರ್ಾಕನಲ್ಲಿ ಕಟಾವು ಮಾಡಿ ಹಾಕಿದ ದ್ರಾಕ್ಷಿಯೂ ಒಣದ್ರಾಕ್ಷಿ ತಯಾರಾಗಿದ್ದು, ಒಣಹಾಕಲು ಹಾಕಿದ ಒಣದ್ರಾಕ್ಷಿ (ಮನೂಕ) ತೊಯ್ದಿದ್ದು, ರೈತರನ್ನು ಸಂಕಷ್ಟಕ್ಕೆ ಸಿಲುಕಿಸಿದೆ.

ತಾಲ್ಲೂಕಿನಲ್ಲಿ ಬುಧವಾರ ಸಂಜೆ ಸುರಿದ ಮಳೆಗೆ ಕೊಟ್ಯಾಳ ರಸ್ತೆಯಲ್ಲಿನ ಸೋಮನಿಂಗ ಬಸಪ್ಪ ಬಾಗಲಕೋಟ ಎಂಬ ರೈತನ ಆರು ಎಕರೆ ದ್ರಾಕ್ಷಿ ಹಣ್ಣಾಗಿದ್ದು, ಈಗಾಗಲೇ ಎರಡು ಎಕರೆ ಕಟಾವು ಮಾಡಿ ಒಣದ್ರಾಕ್ಷಿ ತಯಾರಿಸಲು ಯರ್ಕನಲ್ಲಿ ಹಾಕಿದ್ದಾರೆ. ಇನ್ನೂ ನಾಲ್ಕು ಎಕರೆ ಹಣ್ಣಾದ ದ್ರಾಕ್ಷಿ ಪಡದಲ್ಲಿ ಇದ್ದು, ದ್ರಾಕ್ಷಿ ಸಮೇತ ಸಾಲುಗಳು ನೆಲಕಚ್ಚಿವೆ.

ಬಾಬಾನಗರ ಗ್ರಾಮದ ರೈತ ಶಿವಾನಂದ ಚಂದ್ರಪ್ಪ ನಾವಿ ರೈತನು ದ್ರಾಕ್ಷಿ ಕಟಾವು ಮಾಡಿ ಒಣದ್ರಾಕ್ಷಿ ತಯಾರಿಸಿ ಬಯಲು ಪ್ರದೇಶದಲ್ಲಿ ಒಣಹಾಕಿದ್ದು, ಮಳೆಗೆ ಮೂರು ಟನ್ ಗೂ ಅಧಿಕ ಒಣದ್ರಾಕ್ಷಿ ತೊಯ್ದು ಹೋಗಿದೆ. ಸಧ್ಯ ಒಳ್ಳೆಯ ದರ ಒಣದ್ರಾಕ್ಷಿಗೆ ಇದೆ, ಆದರೆ ತೊಯ್ದ ಒಣದ್ರಾಕ್ಷಿ ಕಪ್ಪು ಬಣ್ಣಕ್ಕೆ ತಿರುಗುವುದರಿಂದ ದರ ಕುಸಿಯುವ ಆತಂಕ ಎದುರಾಗಿದೆ.





ಅಕಾಲಿಕ ಮಳೆಯ ಆಗಮನದಿಂದ ರೈತ ಸಂಕಷ್ಟದಲ್ಲಿ ಸಿಲುಕುತ್ತಿದ್ದು, ಒಂದಲ್ಲ ಒಂದು ತೊಂದರೆ ಎದುರಾಗುತ್ತಲೆ ಇದೆ. ಇದರಿಂದ ರೈತ ಸಾಲದಲ್ಲಿ ಸಿಲುಕಿ ನಲುಗುವಂತಾಗಿದೆ. ಚಾಟ್ನಿ ಮಾಡಿ ಕಡ್ಡಿ ತಯಾರಿಸಿ ಔಷಧಿ, ಗೊಬ್ಬರ, ಕೂಲಿಕಾರರ ಖರ್ಚು ಸೇರಿ ಲಕ್ಷಾಂತರ ಖರ್ಚು ಮಾಡಿ ಒಳ್ಳೆಯ ಆದಾಯದ ನಿರೀಕ್ಷೆಯಲ್ಲಿ ರೈತ ಇರುವಾಗ ನಿಸರ್ಗವು ಸಹ ರೈತನಿಗೆ ನೆರವಾಗುವದಿಲ್ಲ. ಅಕಾಲಿಕ ಮಳೆಗೆ ತುತ್ತಾಗಿ ಮತ್ತಷ್ಟು ನಲುಗಿ ಹೋಗುತ್ತಿದ್ದಾನೆ.

"ಒಣಗಲು ಹಾಕಿದ ಒಣದ್ರಾಕ್ಷಿ ಮಳೆಗೆ ತೊಯ್ದಿದೆ, ಇದರಿಂದ ದರ ಕುಸಿದು ಹೋಗುವದು. ಅದಕ್ಕೆ ವಾಸಿಂಗ್ ಮಾಡಲು ಮತ್ತಷ್ಟು ಖರ್ಚಾಗುವದು."

■ ಶಿವಾನಂದ ಚಂದ್ರಪ್ಪ ನಾವಿ
ರೈತ

"ಬಿರುಗಾಳಿಗೆ ಕಟಾವಿಗೆ ಬಂದ ದ್ರಾಕ್ಷಿ ಸಾಲುಗಳು ಬಿದ್ದಿವೆ. ನೆಲಕ್ಕಪ್ಪಳಿಸಿ ಕಾಯಿ ಹಾಳಾಗಿದೆ. ಹಾಳಾದ ಕಾಯಿ ಒಣದ್ರಾಕ್ಷಿ ಸಹ ಮಾಡಲು ಬರುವದಿಲ್ಲ."

■ ಸೋಮನಿಂಗ ಬಸಪ್ಪ ಬಾಗಲಕೋಟ
ರೈತ

"ರೈತರಿಗೆ ಬಹಳ ಅನ್ಯಾವಾಗುತ್ತಿದ್ದು, ಹಾನಿಗಿಡಾದ ರೈತರ ತೋಟಗಳಿಗೆ ಅಧಿಕಾರಿಗಳು ಕೂಡಲೇ ಭೇಟಿ ನೀಡಿ ಪರಿಶೀಲನೆ ನಡೆಸಬೇಕು. ವೀಮಾ ಕಂಪನಿ ಹಾಗೂ ಸರ್ಕಾರ ಕೂಡಲೇ ಸ್ಪಂದಿಸಬೇಕು."

■ ಸಿದ್ಧಗೊಂಡ ರುದ್ರಗೌಡರ
ಪ್ರಧಾನ ಕಾರ್ಯದರ್ಶಿಗಳು,
ಕರ್ನಾಟಕ ದ್ರಾಕ್ಷಿ ಬೆಳೆಗಾರರ ಸಂಘ ಪ್ರಾದೇಶಿಕ
ಕಚೇರಿ ವಿಜಯಪುರ

# ಶಿವಭಕ್ತಿಗೆ ಸಾಕ್ಷಿ ಗೋಲಗೇರಿ ಗೋಲ್ಲಾಳೇಶ್ವರ

**ಏಪ್ರೀಲ್ 2ರ ಗುರುವಾರ ಎರಡನೇ ಶ್ರೀಶೈಲ ಎಂದೇ ಪ್ರತೀತವಾದ ಸುಕ್ಷೇತ್ರ ಗೋಲಗೇರಿಯ ಶ್ರೀ ಗೋಲ್ಲಾಳೇಶ್ವರ ಜಾತ್ರೆಯ ನಿಮಿತ್ಯ ಈ ವಿಶೇಷ ಲೇಖನ**

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ ಜಿಲ್ಲೆ ಸಿಂದಗಿ ತಾಲೂಕಿನ ಗೋಲಗೇರಿ ಲಿಂಗಯ್ಯನ ಊರೆಂದೇ ಎಲ್ಲ–ರಿಗೂ ಚಿರಪರಿತ. ಇದಕ್ಕೆ ಎರಡನೇ ಶ್ರೀಶೈಲ ಎಂತಲೂ ಕರೆಯುವರು. ಕುರಿ ಕಾಯುವುದರ ಜೊತೆಗೆ ಶಿವನ ಮೇಲಿನ ನಿಷ್ಠೆಯಿಂದ ಆತ ಸಾಕ್ಷಾತ್ಕಾರ

**ಪಡೆದವ. ಗೋಲಗೇರಿ ಹತ್ತಿರದ**

ಡವಳರ ಬಿಲ್ಲುಗ ಮತ್ತು ದುಗ್ಗಳಾದೇವಿ ಪುತ್ರ ಗೋಲ್ಲಾಳ ಶ್ರೀಶೈಲಕ್ಕೆ ತೆರಳುತ್ತಿದ್ದ ಭಕ್ತ–ರಿಗೆ ತನಗೂಂದು ಲಿಂಗ ತರಲು ನಂದಯ್ಯ ಎನ್ನುವನಿಗೆ ಹೇಳುತ್ತಾನೆ. ಇದನ್ನು ಮರೆತು ಬಂದ ನಂದಯ್ಯ ಗೋಲಗೇರಿ ಹತ್ತಿರಕ್ಕೆ ಬರುತ್ತಿದ್ದಂತೆ ಅಲ್ಲೆ ಇದ್ದ ಕುರಿ ಹಿಕ್ಕಿಯೊಂದನ್ನು ತೆಗೆದುಕೊಂಡು ಗೋಲ್ಲಾಳನಿಗೆ ಅದೇ ಲಿಂಗವೆಂದು ಕೊಡುತ್ತಾನೆ. ಇದನ್ನು ನಂಬಿದ ಗೋಲ್ಲಾಳ ಅದನ್ನು ಗೊಬ್ಬರದ ಗುಂಡಿಂ–ಯಲ್ಲಿ ಇಟ್ಟು ನಂದಯ್ಯ ಹೇಳಿದಂತೆ ಪೂಜಿಸುತ್ತಾನೆ. ಶಿವ ಈತನ ಭಕ್ತಿಗೆ ಒಲಿದ ಕಾರಣಕ್ಕೆ ಶಿವ–ಗೊಲ್ಲಾಳ ಒಂದೇ ಎನ್ನುವ ಭಾವ ಭಕ್ತರದು.




ಇದೇ ದಿನಾಂಕ 2/04/26 ಗುರುವಾರ ಶ್ರೀ ಗೊಲ್ಲಾಳೇಶ್ವರ ಜಾತ್ರೆ ಅದ್ದೂರಿಯಾಗಿ ನಡೆಯಲಿದೆ. ಇಲ್ಲಿನ ರಥೋತ್ಸವ ಉತ್ತರ ಕರ್ನಾಟಕ ಹೈದರಾಬಾದ್ ಕರ್ನಾಟಕ ಗಡಿ ಬಾಗ ದೊಡ್ಡ ಆಕರ್ಷಣೆ..

ದೇವಸ್ಥಾನದರ್ಮದರ್ಶಿಗಳ ನೇತೃತ್ವದಲ್ಲಿ ರಥೋತ್ಸವ ಭವ್ಯವಾಗಿ ಜರಗುವದು. ಗುಂಗಿ ಹುಳಗಳ ರೂಪದಲ್ಲಿ ಬರುವ ದೇವರು ತೇರು ಎಳೆಯಲು ಅನುಮತಿ ನೀಡುತ್ತಾನೆ ಎನ್ನುವ ನಂಬಿಕೆ ಈ ಭಾಗದಲ್ಲಿ ಇದೆ.ನಾಡಿನ ಅನೇಕ ಶ್ರೀಗಳು ಭಾಗವಹಿಸುವರು. ರಥ ಸಾಗಿ ಮರಳಿ ಜಾಗಕ್ಕೆ ಬರುವರೆಗೂ ಧರ್ಮದರ್ಶಿಗಳು ಊಟ ಮಾಡುವುದಿಲ್ಲ. ಒಂದೊಂದು ಸಲ ತೇರು ಅವತ್ತೆ ವಾಪಸ್ಸು ಬರುವುದಿಲ್ಲ ಅಂದು ತೇರಿನ ಹತ್ತಿರವೇ ಧರ್ಮದರ್ಶಿಗಳು ಮೊಕ್ಕಾಂ ಮಾಡುತ್ತಾರೆ. ಇವರ ಸ್ನಾನ ಪೂಜೆ ಎಲ್ಲಾ ಅಲ್ಲೆ. ರಥದ ಹಗ್ಗ (ಮಿಣಿ) ಧರ್ಮದರ್ಶಿಗಳ ದೇವರ ಮನೆಯ ಜಗುಲಿ ತಲುಪಿದಾಗ ಮಾತ್ರ ತೇರು ಜಾಗಕ್ಕೆ ಬಂದಂತೆ ಇದು ಜಾತ್ಯತೀತ ಪರಂಪರೆಯು ಹೌದು. ಒಂದು ಪಂಚ ಲೋಹದ ಕಳಸ, ಭೂ ಚಕ್ರ, ಕೊಡೆ, ಕುದುರೆ ಸಿಂಹಗಳಿಂದ ಅಲಂಕೃತ ವಾಗುವ ರಥಕ್ಕೆ ಪ್ರತಿ ವರ್ಷ ಎರಡು ಬ್ಯಾರಲ್ ಕ್ವಿಂಟಲ್ ಒಳ್ಳೆಣ್ಣೆ ಹಚ್ಚಲಾಗುವದು. ಪ್ರತಿ ವರ್ಷ ರಥೋತ್ಸವ. ದಿನದಂದು ದಿ.ಗೊಲ್ಲಾಳಪ್ಪ ಪಾಟೀಲ ಇಬ್ರಾಹಿಂಪೂರ ಇವರ ಸ್ಮರಣಾರ್ಥ ಇವರ ಮಕ್ಕಳಾದ ಸುಭಾಸಗೌಡ ಪಾಟೀಲರು ಹಾಗೂ ಸಹೋದರರಿಂದ ಪ್ರಸಾದ (ದಾಸೋಹ )ವ್ಯವಸ್ಥೆ ಇರುವದು. ಈ ವರ್ಷ ಅದ್ದೂರಿಯಾಗಿ ರಥೋತ್ಸವ ನಡೆಯುವುದು. ತಾವೂ ಬನ್ನಿ, ಗೋಲಗೇರಿ ಗೊಲ್ಲಾಳೇಶ್ವರ ಭವ್ಯ ರಥೋತ್ಸವದಲ್ಲಿ ಪಾಲ್ಗೊಳ್ಳಿ..

**ಅಥಣಿಯಲ್ಲಿ ಭರವಸೆ ಬೆಳಕು ಫೌಂಡೇಶನ್ ಅಧ್ಯಕ್ಷೆ ರೂಪಾ ಕಾಂಬಳೆ ಪತ್ರಿಕಾಗೋಷ್ಠಿ**

# ಮಾ.31ರಂದು ವಿಶ್ವ ಮಹಿಳಾ ದಿನಾಚರಣೆ & ಮುತ್ತೈದೆಯರಿಗೆ ಉಡಿ ತುಂಬುವಿಕೆ

■ ಉದಯರಶ್ಮಿ ದಿನಪತ್ರಿಕೆ

ಅಥಣಿ: ಭರವಸೆ ಬೆಳಕು ಫೌಂಡೇಶನ್ ವತಿಯಿಂದ ದ್ವಿತೀಯ ವರ್ಷದ ವಾರ್ಷಿಕೋತ್ಸವ, ವಿಶ್ವ ಮಹಿಳಾ ದಿನಾಚರಣೆ ಹಾಗೂ ಮುತ್ತೈದೆಯ–ರಿಗೆ ಉಡಿ ತುಂಬುವ ಕಾರ್ಯಕ್ರಮವನ್ನು ಮಾರ್ಚ್ 31ರಂದು ಬೆಳಗ್ಗೆ 10 ಗಂಟೆಗೆ ಪಟ್ಟಣದ ಗಚ್ಚಿನ ಮಠದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ ಎಂದು ಭರವಸೆ ಬೆಳಕು ಫೌಂಡೇಶನ್ ಅಧ್ಯಕ್ಷೆ ರೂಪಾ ಕಾಂಬಳೆ ಹೇಳಿದರು

ಅವರು ಪಟ್ಟಣದ ನಿರೀಕ್ಷಣಾ ಮಂದಿರದಲ್ಲಿ ನಡೆದ ಪತ್ರಿಕಾಗೋಷ್ಠಿಯಲ್ಲಿ ಮಾತನಾಡಿ, ಈ ಕಾರ್ಯಕ್ರಮದ ಉದ್ಘಾಟನೆಯನ್ನು ಕರ್ನಾಟಕ ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರಾದ ಡಾ. ನಾಗಲಕ್ಷ್ಮಿ ಚೌಧರಿ ಅವರು ನೆರವೇ–ರಿಸಲಿದ್ದಾರೆ. ಶಾಸಕ ಲಕ್ಷ್ಮಣ ಸವದಿ ಅವರು ಕಾರ್ಯಕ್ರಮದ ಅಧ್ಯಕ್ಷತೆ ವಹಿಸಲಿದ್ದಾರೆ. ತಾಲೂಕಿನ ಹಾಗೂ ಗ್ರಾಮೀಣ ಭಾಗದ ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಗೊಳಿಸಬೇಕು ಎಂದು ಮನವಿ ಮಾಡಿದರು.ನಂತರ ಕರುನಾಡ ಕಾರ್ಮಿಕ ವೇದಿಕೆ ಜಿಲ್ಲಾ ಅಧ್ಯಕ್ಷೆ ರಾಣಿ ಬಡಿಗೇರ್ ಮಾತನಾಡಿ, "ರಾಜ್ಯ ಮಹಿಳಾ ಆಯೋಗದ ಅಧ್ಯಕ್ಷರು ಮೊದಲ ಬಾರಿಗೆ ಅಥ–ಣಿಗೆ ಆಗಮಿಸುತ್ತಿದ್ದಾರೆ. ಮಹಿಳೆಯರು ಬೆಂಗಳೂರಿಗೆ ಹೋಗಿ ತಮ್ಮ ಸಮಸ್ಯೆಗಳನ್ನು ಹೇಳಿಕೊಳ್ಳುವುದು ಕಷ್ಟಸಾಧ್ಯ. ಹೀಗಾಗಿ, ಅಥಣಿ ಹಾಗೂ ಸುತ್ತಮುತ್ತಲಿನ ಗ್ರಾಮಗಳ ಮಹಿಳೆಯರು ಈ ಕಾರ್ಯಕ್ರಮಕ್ಕೆ ಆಗಮಿಸಿ, ತಮ್ಮ ಕುಂದುಕೊರತೆಗಳನ್ನು ನೇರವಾಗಿ ಅವರ ಗಮನಕ್ಕೆ ತಂದು ಸರ್ಕಾರದಿಂದ ಸಿಗಬೇಕಾದ ಸೌಲಭ್ಯಗಳನ್ನು ಪಡೆದುಕೊಳ್ಳಲು ಇದೊಂದು ಉತ್ತಮ ಅವಕಾಶ" ಎಂದರು.



ಈ ವೇಳೆ ಫೌಂಡೇಶನ್ ಕಾರ್ಯದರ್ಶಿ ಕಾದಂಬರಿ ಅಕ್ಕೋಳ, ಸವಿತಾ ಕಾಂಬಳೆ, ಗೀತಾ ಮಡ್ಡಿ, ವೈಶಾಲಿ ಮೇಲ್ಗಡೆ, ಸೇರಿದಂತೆ ಇನ್ನಿತಿತರು ಉಪಸ್ಥಿತರಿದ್ದರು.

# ಮಾ.30 ರಿಂದ ಲಿವರ್ ಸಮಸ್ಯೆ ಕುರಿತು ಉಚಿತ ತಪಾಸಣೆ & ಚಿಕಿತ್ಸೆ ಶಿಬಿರ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ನಗರದ ಪ್ರತಿಷ್ಠಿತ ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ.ಎಸ್ ಆಯುರ್ವೇದ ಮಹಾವಿದ್ಯಾಲಯ, ಆಸ್ಪತ್ರೆ ಮತ್ತು ಸಂಶೋಧನ ಕೇಂದ್ರದ ಕಾಯಚಿಕಿತ್ಸೆ ವಿಭಾಗದ ವತಿಯಿಂದ ಮಾರ್ಚ 30 ರಿಂದ ಎಪ್ರಿಲ್ 4ರ ವರೆಗೆ (25 ರಿಂದ 60 ವರ್ಷದವರಿಗೆ) ಲಿವರ್ ಸಮಸ್ಯೆ ಕು–ರಿತು ಉಚಿತ ತಪಾಸಣೆ ಮತ್ತು ಚಿಕಿತ್ಸೆ ಶಿಬಿರ ಆಯೋಜಿಸಲಾಗಿದೆ.

ಸೋಮವಾರದಿಂದ ಶನಿವಾರದವರೆಗೆ ನಡೆಯಲಿರುವ ಈ ಶಿಬಿರದಲ್ಲಿ ಫ್ಯಾಟಿ ಲಿವರ್ (ಲಿವರ್ ಸಮಸ್ಯೆ) ಸಮಸ್ಯೆಯನ್ನು ಎದು–ರಿಸುತ್ತಿರುವ ಸಾರ್ವಜನಿಕರು ಈ ಶಿಬಿರದ ಸದುಪಯೋಗ ಪಡೆದುಕೊಳ್ಳಬೇಕು ಎಂದು ಬಿ.ಎಲ್.ಡಿ.ಇ ಸಂಸ್ಥೆಯ ಎ.ವಿ. ಎಸ್ ಮಹಾವಿದ್ಯಾಲಯ ಆಸ್ಪತ್ರೆಯ ಆಡಳಿತಾಧಿಕಾರಿ ಡಾ. ಸಂಜಯ ಕಡ್ಲಿಮಟ್ಟಿ ಮಾಧ್ಯಮ ಪ್ರಕಟಣೆಯಲ್ಲಿ ಮಾಹಿತಿ ನೀಡಿದ್ದಾರೆ.ಹೆಚ್ಚಿನ ಮಾಹಿತಿಗಾಗಿ ಮೊ. ನಂ. 9513397413 ಸಂಪರ್ಕಿಸಬಹುದಾಗಿದೆ.

# ಮಾ.27 ರಂದು ವಿಶೇಷ ಉಪನ್ಯಾಸ

■ ಉದಯರಶ್ಮಿ ದಿನಪತ್ರಿಕೆ

ಪಟ್ಟಣದ ಬಿ.ಎಲ್.ಡಿ.ಇ ಸಂಸ್ಥೆಯ ಬಸವೇಶ್ವರ ಕಲಾ ಮತ್ತು ವಾಣಿಜ್ಯ ಮಹಾವಿದ್ಯಾಲಯದ ಸಭಾ ಭವನದಲ್ಲಿ ಕರ್ನಾಟಕ ಸಾಹಿತ್ಯ ಅಕಾಡೆಮಿ ಹಾಗೂ ಮಹಾವಿದ್ಯಾಲಯದ ಕನ್ನಡ ವಿಭಾಗ ಮತ್ತು ಐ.ಕ್ಯೂ.ಎ.ಸಿ. ಸಹಯೋಗದಲ್ಲಿ ಮಾ.27 ರಂದು ಬೆಳಗ್ಗೆ 10.30 ಗಂಟೆಗೆ ಪಿ. ಲಂಕೇಶ್ ಬದುಕು ಬರಹ ಪತ್ರಿಕೋದ್ಯಮ ಕುರಿತು ವಿಶೇಷ ಉಪನ್ಯಾಸ ಕಾರ್ಯಕ್ರಮವನ್ನು ಹಮ್ಮಿಕೊಂಡಿದೆ. ಕಾರ್ಯಕ್ರಮವನ್ನು ಆದರ್ಶ ಶಿಕ್ಷಕರ ವೇದಿಕೆಯ ಜಿಲ್ಲಾಧ್ಯಕ್ಷ ಉಮೇಶ ಕೌಲಗಿ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಮಹಾವಿದ್ಯಾಲಯದ ಪ್ರಾಚಾರ್ಯ ಡಾ.ಎ.ವ್ಹಿ.ಸೂರ್ಯವಂಶಿ ವಹಿಸುವರು. ಸಾಹಿತಿ ಸಿದ್ದರಾಮ ಬಿರಾದಾರ ವಿಶೇಷ ಉಪನ್ಯಾಸ ನೀಡುವರು. ಕರ್ನಾಟಕ ಸಾಹಿತ್ಯ ಅಕಾಡೆಮಿಯ ಸದಸ್ಯ ಮಹಾದೇವ ಬಸರಕೋಡ ಆಶಯ ನುಡಿಗಳನ್ನಾಡುವರು.ಸಾಹಿತಿ ಶಂಕರ ಬೈಚಬಾಳ, ಮಲ್ಲಿಕಾರ್ಜುನ ಗದ್ದನಕೇರಿ ಇತರರು ಆಗಮಿಸುವರು ಎಂದು ಮಹಾವಿದ್ಯಾಲಯದ ಕನ್ನಡ ವಿಭಾಗದ ಮುಖ್ಯಸ್ಥ ಡಾ. ಬಿ.ಎಂ.ಸಾಲವಾಡಗಿ ಅವರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಗ್ರಾಹಕರ ಕಾಯ್ದೆಯಿಂದ ನ್ಯಾಯಸಮ್ಮತ ಸೇವೆ, ಸುರಕ್ಷಿತ ಉತ್ಪನ್ನ ಲಭ್ಯ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ಭಾರತದಲ್ಲಿ ಗ್ರಾಹಕರ ಹಕ್ಕುಗಳನ್ನು ರಕ್ಷಿಸಲು ಜಾರಿಗೆ ತಂದಿರುವ Consumer Protection Act,2019 ಮಹತ್ವದ ಕಾಯ್ದೆಯಾಗಿದ್ದು, ಗ್ರಾಹಕ–ರಿಗೆ ನ್ಯಾಯಸಮ್ಮತ ಸೇವೆ ಮತ್ತು ಸುರಕ್ಷಿತ ಉತ್ಪನ್ನಗಳನ್ನು ಒದಗಿಸುವುದನ್ನು ಖಚಿತಪಡಿಸುತ್ತದೆ ಎಂದು ಜಿಲ್ಲಾಧಿಕಾರಿ ಡಾ. ಆನಂದ ಕೆ ಹೇಳಿದರು. ಬ ು ದ್ ' ವ ಾ ರ' ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಆಹಾರ ನಾಗರಿಕ ಸರಬರಾಜು ಹಾಗೂ ಗ್ರಾಹಕರ ವ್ಯವಹಾರಗಳ ಇಲಾಖೆ, ಕಾನೂನು ಮಾಪನ ಶಾಸ್ತ್ರ ಇಲಾಖೆ, ಆಹಾರ ಸುರಕ್ಷತೆ ಹಾಗೂ ಗುಣಮಟ್ಟ ಪ್ರಾಧಿಕಾರ, ಕೆಎಫ್ ಸಿಎಸ್ಸಿ ನಿಗಮ ವಿಜಯಪುರ, ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರ ನ್ಯೂ ಸಂಸ್ಥೆಯ ಸಹಯೋಗದಲ್ಲಿ ಬುಧವಾರ ಜಿಲ್ಲಾ ಪಂಚಾಯತಿಯ ಸಭಾಂಗಣದಲ್ಲಿ ನಡೆದ ವಿಶ್ವ ಗ್ರಾಹಕರ ದಿನಾಚರಣೆ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಈ ಕಾಯ್ದೆಯಡಿ ಗ್ರಾಹಕರಿಗೆ ಮುಖ್ಯವಾಗಿ ಸುರಕ್ಷತಾ ಹಕ್ಕು, ಮಾಹಿತಿ ಪಡೆಯುವ ಹಕ್ಕು, ಆಯ್ಕೆ ಮಾಡುವ ಹಕ್ಕು, ಕೇಳಿಸಿಕೊಳ್ಳುವ ಹಕ್ಕು, ಪರಿಹಾರ ಪಡೆಯುವ ಹಕ್ಕು ಮತ್ತು ಗ್ರಾಹಕ ಶಿಕ್ಷಣ ಹಕ್ಕು ಪ್ರಮುಖವಾಗಿವೆ. ಇವುಗಳ ಮೂಲಕ ಗ್ರಾಹಕರು ಮೋಸ, ಕಳಪೆ ಗುಣಮಟ್ಟದ ವಸ್ತುಗಳು ಹಾಗೂ ಸೇವೆಗಳ ವಿರುದ್ಧ ಕಾನೂನುಬದ್ಧವಾಗಿ ಹೋರಾಡಲು ಅವಕಾಶ ದೊರಕುತ್ತದೆ. ಈ ಕಾಯ್ದೆಯ ಪ್ರಕಾರ, ಗ್ರಾಹಕರ ದೂರುಗಳನ್ನು ಶೀಘ್ರವಾಗಿ ಪರಿಹರಿಸಲು ಜಿಲ್ಲಾ, ರಾಜ್ಯ ಮತ್ತು ರಾಷ್ಟ್ರೀಯ ಮಟ್ಟದ ಗ್ರಾಹಕ ವಿವಾದ ಪರಿಹಾರ ಆಯೋಗಗಳನ್ನು ಸ್ಥಾಪಿಸಲಾಗಿದೆ. ಸುರಕ್ಷಿತ ಉತ್ಪನ್ನಗಳು, ಆತ್ಮ ವಿಶ್ವಾಸದ ಗ್ರಾಹಕರು, ಗ್ರಾಹಕನೇ ರಾಜ– ನಿಮ್ಮ ಹಕ್ಕುಗಳನ್ನು ತಿಳಿದು ಬಳಸಿ ಎಂಬ ಘೋಷವಾಕ್ಯದೊಂದಿಗೆ ಹಕ್ಕುಗಳ ಉಲ್ಲಂಘನೆ ಸಂದರ್ಭಗಳಲ್ಲಿ ಈ ಆಯೋಗಗಳಿಗೆ ದೂರು ಸಲ್ಲಿಸಿ ನ್ಯಾಯ ಪಡೆಯಬಹುದು. ಇತ್ತೀಚೆಗೆ ಆನ್‌ಲೈನ್ ವ್ಯಾಪಾರ ಹೆಚ್ಚಾಗುತ್ತಿರುವ ಹಿನ್ನೆಲೆಯಲ್ಲಿ, ಗ್ರಾಹಕರಿಗೆ ಪಾರದರ್ಶಕ ಮಾಹಿತಿ ನೀಡುವುದು ಕಡ್ಡಾಯವಾಗಿದೆ. ಸರ್ಕಾರವು ಗ್ರಾಹಕರಲ್ಲಿ ಜಾಗೃತಿ ಮೂಡಿಸಲು ವಿವಿಧ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿದ್ದು, ಜನರು ತಮ್ಮ ಹಕ್ಕುಗಳನ್ನು ತಿಳಿದುಕೊಳ್ಳುವಂತೆ ಕರೆ ನೀಡಿದರು.. ಗ್ರಾಹಕರು ಜಾಗೃತರಾಗಿದ್ದು, ಯಾವುದೇ ಅನ್ಯಾಯ ಎದುರಾದಲ್ಲಿ ತಕ್ಷಣ ದೂರು ಸಲ್ಲಿಸುವುದು ಹಾಗೂ ಪರಿಹಾರ ಕಂಡುಕೊಳ್ಳಲು ಸಹಕಾರಿಯಾಗಲಿದೆ ಎಂದು ಅವರು ಹೇಳಿದರು.

ಕಾರ್ಯಕ್ರಮದ ಮುಖ್ಯ ಅತಿಥಿಗಳಾಗಿ ಮಾತನಾಡಿದ ಹಿರಿಯ ಸಿವಿಲ್ ನ್ಯಾಯಾಧೀಶರು ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ ಸದಸ್ಯ ಕಾರ್ಯದರ್ಶಿಗಳಾದ ಅರವಿಂದ ಹಾಗರಗಿ ಮಾತನಾಡಿ ನಮ್ಮ ದಿನನಿತ್ಯದ ಕಾರ್ಯ ಚಟುವಟಿಕೆಗಳಿಗೆ ಅಗತ್ಯ ವಸ್ತುಗಳನ್ನು ಖರಿದಿಸುತ್ತಿದ್ದು, ಖರಿದಿಸಿದ ವಸ್ತುವಿಗೆ ನಾವು ಗ್ರಾಹಕರಾಗುತ್ತೇವೆ. ನಮಗೆ ಖರೀದಿಸಿದ ವಸ್ತುವಿನಲ್ಲಿ ಮೋಸವಾಗಿದೆ ಅಂದು ತಿಳಿದಾಗ ನಾವು ಪರಿಹಾರಕ್ಕಾಗಿ ಈ ವೇದಿಕೆ ಬಂದು ದೂರನ್ನು ಸಲ್ಲಿಸಿ ಪರಿಹಾರ ಕಂಡುಕೊಳ್ಳಬಹುದಾಗಿದೆ. ನಮ್ಮ ದೇಶ ಕೃಷಿ ಪ್ರಧಾನವಾದ ದೇಶ ಈ ಕಾಯಿದೆ ಕುರಿತು ರೈತರಲ್ಲಿ ಹೆಚ್ಚಿನ ಜಾಗೃತಿ ಮೂಡಿಸಬೇಕು ಪರಿಹಾರ ಒದಗಿಸುವಲ್ಲಿ ಬಹಳ ಸಹಕಾರಿಯಾಗಲಿದೆ.



ಮೋಸವಾಗಿದ್ದು ಕಂಡು ಬಂದಲ್ಲಿ ರೈತರು ಕೂಡ ಮುಂದೆ ಬಂದು ನೇರವಾಗಿ ಈ ವೇದಿಕೆಗೆ ಬಂದಲ್ಲಿ ನಾವು ಕೂಡ ಪರಿಹಾರ ಒದಗಿಸಲು ಕ್ರಮವಹಿಸಲಾಗುವುದು.

ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ ಸದಸ್ಯರಾದ ಕಮಲ ಕಿಶೋರ ಜೋಶಿ ಮಾತನಾಡಿ ಮಾರುಕಟ್ಟೆಯಲ್ಲಿ ನಾವು ಖರೀದಿಸುವ ಪ್ರತಿಯೊಂದು ವಸ್ತುವಿನ ಕುರಿತು ನಿಖರವಾದ ಮಾಹಿತಿ ಪಡೆದುಕೊಳ್ಳಬೇಕು. ಪ್ರತಿ ವಸ್ತುವಿನ ಮೇಲೆ ಕನಿಷ್ಟ ದರ, ಮುಕ್ತಾಯದ ದಿನಾಂಕ ಹಾಗೂ ಉತ್ಪಾದನೆ ಕು–ರಿತು ನಮೂದಿಸಲಾಗಿರುತ್ತದೆ. ಒಂದು ವೇಳೆ ಇದು ಯಾವುದು ಇಲ್ಲದಿದ್ದಲ್ಲಿ ಗ್ರಾಹಕರಾದ ನಾವು ಅಂಗಡಿ ಮಾಲಿಕರನ್ನು ಪ್ರಶ್ನಿಸಿ ಅವರಿಂದ ಸಮರ್ಪಕ ಮಾಹಿತಿ ಪಡೆದುಕೊಳ್ಳಬೇಕು ಯಾವುದೇ ನ್ಯಾಯವಾದಿಗಳ ಸಹಾಯ ಪಡೆಯದೆ ಮದ್ಯವರ್ತಿಗಳಿಲ್ಲದೆ ನೇರವಾಗಿ ಈ ವೇದಿಕೆಗೆ ಬಂದು ದೂರನ್ನು ನೀಡಬಹುದಾಗಿದೆ.

ಕಾರ್ಯಕ್ರಮದಲ್ಲಿ ಉಪನ್ಯಾಸ ನೀಡಿದ ಹಿರಿಯ ನ್ಯಾಯವಾದಿಗಳಾದ ಎಂ.ಜಿ ಮಠಪತಿ ಮಾತನಾಡಿ ಯಾವುದೇ ವಸ್ತು ಖರೀದಿಸಿದಲ್ಲಿ ಅದರ ಗುಣಮಟ್ಟ, ಸುರಕ್ಷತೆ ನಾವು ಮೊದಲು ಅರಿಯಬೇಕು ಅಂದಾಗ ನಾವು ಗ್ರಾಹಕರಾಗುತ್ತೇವೆ. ಅದು ನಮ್ಮ ಹಕ್ಕು ಕೂಡ ಆಗಿದೆ. ಖರೀದಿಸಿದ ವಸ್ತುವಿನಲ್ಲಿ ಮೋಸ ಹಾಗೂ ತೊಂದರೆಗಳಾದಲ್ಲಿ ಪರಿಹಾರಕ್ಕಾಗಿ ಈ ಗ್ರಾಹಕರ ವೇದಿಕೆಯು ತಮಗೆ ಎಲ್ಲ ರೀತಿಯ ಸಹಾಯ ಸಹಕಾರ ನೀಡಿ ದೂರಿನನ್ವಯ ಪರಿಹಾರ ನೀಡಲು ಕ್ರಮ ವಹಿಸಲಾಗುವುದು.

ಜಿಲ್ಲಾ ಗ್ರಾಹಕರ ದೂರು ಪರಿಹಾರ ವೇದಿಕೆ ಅಧ್ಯಕ್ಷರಾದ ಶ್ರೀಮತಿ ವಿದ್ಯಾ ಗಲಗಲಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು.

ಆಹಾರ ಸುರಕ್ಷತಾ ಅಧಿಕಾರಿಗಳಾದ ಆರ್.ಎಸ್ ಬಿರಾದಾರ ವಂದಿಸಿದರು. ಕಾರ್ಯಕ್ರಮದಲ್ಲಿ ಜಿಲ್ಲಾ ಪಂಚಾಯತ ಉಪ ಕಾಯದರ್ಶಿ ಪ್ರಕಾಶ ವಡ್ಡರ, ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯ ಉಪ ನಿರ್ದೇಶಕರಾದ ವಿಜಯಕುಮಾರ ಪಾಟೀಲ, ಜಿಲ್ಲಾ ಗ್ರಾಹಕರ ಮಾಹಿತಿ ಕೇಂದ್ರದ ಅಧ್ಯಕ್ಷರಾದ ಎಸ್.ಎಮ್ ಕರೆಕಲ್ಲ,ಕೆ.ಎಸ್.ಎಫ್.ಸಿ ನಿಗಮದ ಜಿಲ್ಲಾ ವ್ಯವಸ್ಥಾಪಕರಾದ ಡಿ.ಆರ್ ನಾಯ್ಕೋಡಿ ಕಾನೂನು ಮಹಾವಿದ್ಯಾಲಯದ ವಿದ್ಯಾರ್ಥಿಗಳು, ನ್ಯಾಯವಾದಿಗಳು, ಪಡಿತರ ವಿತರಕರು ಹಾಗೂ ಇತರರು ಉಪಸ್ಥಿತರಿದ್ದರು.

# ರಾಮನ ಜೀವನದ ಮೌಲ್ಯಗಳು ಬದುಕಿಗೆ ಶಾಶ್ವತ ಪ್ರೇರಣೆ

**ಇಂದು (ಮಾರ್ಚ್ 27 ಶುಕ್ರವಾರ) "ರಾಮನವಮಿ" ನಿಮಿತ್ಯ ಈ ವಿಶೇಷ ಲೇಖನ**

■ ಉದಯರಶ್ಮಿ ದಿನಪತ್ರಿಕೆ

ಭಾರತೀಯ ಸಂಸ್ಕೃತಿಯ ಮಹಾನ್ ಗ್ರಂಥವಾದ ರಾಮಾಯಣ ಮಾನವ ಜೀವನಕ್ಕೆ ದಾರಿದೀಪವಾಗಿದೆ. ಅದರ ಕೇಂದ್ರ ವ್ಯಕ್ತಿತ್ವವಾದ ಶ್ರೀರಾಮ ಮಾನವನಾಗಿ ಬದುಕಿ, ಮಾನವೀಯ ಮೌಲ್ಯಗಳಿಗೆ ಅತ್ಯುನ್ನತ ಮಾದರಿಯಾಗಿದ್ದಾನೆ. ರಾಮನ ಜೀವನದಲ್ಲಿ ಕಂಡುಬರುವ ಮೌಲ್ಯಗಳು ಕೇವಲ ಕಾಲಾತೀತವಲ್ಲ, ಇಂದಿನ ಆಧುನಿಕ ಜೀವನಕ್ಕೂ ಅತ್ಯಂತ ಪ್ರಾಸಂಗಿಕ. ಈಗ ಆ ಮೌಲ್ಯಗಳನ್ನು ಪ್ರತಿಯೊಂದಾಗಿ ವಿಸ್ತತವಾಗಿ ನೋಡೋಣ.

**1. ಸತ್ಯನಿಷ್ಠ ವ್ಯಕ್ತಿತ್ವದ ಅಡಿಪಾಯ**

ರಾಮನ ಜೀವನದಲ್ಲಿ ಸತ್ಯವು ಕೇವಲ ಒಂದು ಗುಣವಲ್ಲ; ಅದು ಅವನ ಜೀವನದ ಮೂಲತತ್ವ. ದಶರಥನ ಮಾತನ್ನು ಉಳಿಸಲು ರಾಜಪದವನ್ನು ತ್ಯಜಿಸಿ ವನವಾಸಕ್ಕೆ ತೆರಳಿದಾಗ, ಅವನು ತನ್ನ ವೈಯಕ್ತಿಕ ಆಸೆಗಳನ್ನು ಬಿಟ್ಟು ಸತ್ಯವನ್ನು ಆರಿಸಿಕೊಂಡನು. ಸತ್ಯನಿಷ್ಠೆ ಎಂದರೆ ಕೇವಲ ಸುಳ್ಳು ಹೇಳದಿರುವುದಲ್ಲ; ಅದು ಮನಸ್ಸು, ಮಾತು ಮತ್ತು ಕೃತ್ಯಗಳ ಏಕತೆಯನ್ನು ಕಾಯ್ದುಕೊಳ್ಳುವುದು.

ಇಂದಿನ ಕಾಲದಲ್ಲಿ ಲಾಭಕ್ಕಾಗಿ ಸುಳ್ಳು ಹೇಳುವುದು ಸಾಮಾನ್ಯವಾಗಿ ಬಿಟ್ಟಿದೆ. ಆದರೆ ಸತ್ಯವನ್ನು ಹಿಡಿದಿಟ್ಟುಕೊಳ್ಳುವವರು ದೀರ್ಘಕಾಲದಲ್ಲಿ ವಿಶ್ವಾಸವನ್ನು ಗಳಿಸುತ್ತಾರೆ. ಸತ್ಯನಿಷ್ಠೆಯು ವ್ಯಕ್ತಿತ್ವವನ್ನು ಬಲಪಡಿಸುತ್ತದೆ. ಅದು ನಮ್ಮನ್ನು ಆತ್ಮವಿಶ್ವಾಸಿಗಳನ್ನಾಗಿ ಮಾಡುತ್ತದೆ. ಸಮಾಜದಲ್ಲಿ ಗೌರವವನ್ನು ಹೆಚ್ಚಿಸುತ್ತದೆ.

**2. ಕರ್ತವ್ಯನಿಷ್ಠೆ ಜೀವನದ ಧರ್ಮ**

ರಾಮನು ತನ್ನ ಪ್ರತಿಯೊಂದು ಪಾತ್ರವನ್ನೂ ಅತ್ಯಂತ ಜವಾಬ್ದಾರಿ ಯಿಂದ ನಿರ್ವಹಿಸಿದನು. ಮಗನಾಗಿ ತಂದೆಯ ಮಾತನ್ನು ಪಾಲಿಸಿದನು, ಪತಿಯಾಗಿ ಸೀತೆಯ ಸುರಕ್ಷತೆಗಾಗಿ ಹೋರಾಡಿದನು, ಸಹೋದರನಾಗಿ ಲಕ್ಷ್ಮಣನನ್ನು ಪ್ರೀತಿಯಿಂದ ಕಾಪಾಡಿದನು, ರಾಜನಾಗಿ ಪ್ರಜೆಗಳ ಹಿತಕ್ಕಾಗಿ ಆಡಳಿತ ನಡೆಸಿದನು.

ಕರ್ತವ್ಯವನ್ನು ರಾಮನು ಬಾಧ್ಯತೆಯಾಗಿ ನೋಡಲಿಲ್ಲ; ಅದು ಅವನ ಧರ್ಮವಾಗಿತ್ತು.

ಇಂದಿನ ಜೀವನದಲ್ಲಿ ನಾವು ಹಲವಾರು ಜವಾಬ್ದಾರಿಗಳನ್ನು ಹೊಂದಿದ್ದೇವೆ, ಆದರೆ ಅವನ್ನು ನಿರ್ಲಕ್ಷ್ಯ ಮಾಡುವ ಪ್ರವೃತ್ತಿ ಹೆಚ್ಚುತ್ತಿದೆ. ಕರ್ತವ್ಯವನ್ನು ಪ್ರೀತಿಯಿಂದ ಮಾಡಿದಾಗ ಅದು ಸೇವೆಯಾಗಿ ಪರಿವರ್ತನೆಗೊಳ್ಳುತ್ತದೆ. ಇದು ನಮ್ಮ ಜೀವನಕ್ಕೆ ಅರ್ಥ ನೀಡುತ್ತದೆ ಮತ್ತು ಸಮಾಜದಲ್ಲಿ ನಮ್ಮ ಸ್ಥಾನವನ್ನು ಗಟ್ಟಿಗೊಳಿಸುತ್ತದೆ.

**3. ಪಿತೃಭಕ್ತಿ ಮತ್ತು ಹಿರಿಯರ ಗೌರವ ಸಂಸ್ಕೃತಿಯ ಕಂಬ**

ರಾಮನು ತನ್ನ ತಂದೆಯ ಮಾತಿಗಾಗಿ 14 ವರ್ಷಗಳ ವನವಾಸವನ್ನು ಸ್ವೀಕರಿಸಿದನು. ಇದು ಕೇವಲ ವಿಧೇಯತೆ ಅಲ್ಲ; ಅದು ಗೌರವ, ಪ್ರೀತಿ ಮತ್ತು ನಿಷ್ಠೆಯ ಸಂಕೇತ.

ಇಂದಿನ ಕಾಲದಲ್ಲಿ ಹಿರಿಯರ ಮಾತಿಗೆ ಮಹತ್ವ ಕಡಿಮೆಯಾಗುತ್ತಿದೆ. ಆದರೆ ಅವರ ಅನುಭವವು ಜೀವನದ ಮಾರ್ಗದರ್ಶಕ.

ಹಿರಿಯರನ್ನು ಗೌರವಿಸುವುದು ನಮ್ಮ ಸಂಸ್ಕೃತಿಯ ಪ್ರಮುಖ ಅಂಶ.

ಕುಟುಂಬದಲ್ಲಿ ಹಿರಿಯರಿಗೆ ಗೌರವ ನೀಡಿದರೆ, ಕುಟುಂಬದ ಬಾಂಧವ್ಯ ಗಟ್ಟಿಯಾಗುತ್ತದೆ.ಅದು ಸಮಾಜದ ಏಕತೆಯನ್ನೂ ಹೆಚ್ಚಿಸುತ್ತದೆ.

**4. ತ್ಯಾಗ ಮತ್ತು ಸಹನೆ ಯಶಸ್ಸಿನ ದಾರಿ**

ರಾಮನ ಜೀವನವು ತ್ಯಾಗಗಳ ಸರಮಾಲೆ. ಅವನು ತನ್ನ ಸೌಕರ್ಯಗಳನ್ನು ಬಿಟ್ಟು ಅರಣ್ಯದಲ್ಲಿ ಜೀವನ ನಡೆಸಿದನು. ಸಂಕಷ್ಟಗಳಲ್ಲಿ ಸಹ ಧೈರ್ಯ ಕಳೆದುಕೊಳ್ಳಲಿಲ್ಲ. ಸಹನೆ ಮತ್ತು ತ್ಯಾಗವು ವ್ಯಕ್ತಿಯ ಒಳಶಕ್ತಿಯನ್ನು ಹೆಚ್ಚಿಸುತ್ತದೆ. ಇಂದಿನ ಕಾಲದಲ್ಲಿ ತಕ್ಷಣ ಫಲಿತಾಂಶಗಳನ್ನು ನಿರೀಕ್ಷಿಸುವ ಮನೋಭಾವ ಹೆಚ್ಚಾಗಿದೆ. ಆದರೆ ಜೀವನದಲ್ಲಿ ದೊಡ್ಡ ಸಾಧನೆಗಳನ್ನು ಮಾಡಲು ತಾಳ್ಮೆ ಅಗತ್ಯ. ತ್ಯಾಗವು ನಮ್ಮನ್ನು ಬಲಿಷ್ಠರನ್ನಾಗಿ ಮಾಡುತ್ತದೆ, ಸಹನೆ ನಮ್ಮನ್ನು ಸ್ಥಿರವಾಗಿರಿಸುತ್ತದೆ.

**5. ಸಂಬಂಧಗಳ ಮಹತ್ವ ಪ್ರೀತಿ ಮತ್ತು ನಂಬಿಕೆಯ ಆಧಾರ**

ರಾಮನ ಜೀವನದಲ್ಲಿ ಸಂಬಂಧಗಳು ಅತ್ಯಂತ ಪವಿತ್ರ. ಲಕ್ಷ್ಮಣನೊಂದಿಗೆ ಅವನ ಸಹೋದರ ಪ್ರೀತಿ ಅಪಾರ.

ಸೀತಾ ಯೊಂದಿಗೆ ಅವನ ದಾಂಪತ್ಯ ಜೀವನ ನಿಷ್ಠೆಯ ಪ್ರತೀಕ.

ಹನುಮಂತ ನ ಭಕ್ತಿ ಮತ್ತು ಸೇವಾಭಾವ ರಾಮನ ಮೇಲಿನ ಅಪಾರ ಪ್ರೀತಿಯನ್ನು ತೋರಿಸುತ್ತದೆ.



ಸಂಬಂಧಗಳು ಕೇವಲ ರಕ್ತಸಂಬಂಧಗಳಿಂದ ಮಾತ್ರವಲ್ಲ; ನಂಬಿಕೆ ಮತ್ತು ತ್ಯಾಗದಿಂದ ಕಟ್ಟಲ್ಪಡುತ್ತವೆ. ಇಂದಿನ ಯುಗದಲ್ಲಿ ಸಂಬಂಧಗಳು ದುರ್ಬಲವಾಗುತ್ತಿರುವಾಗ, ರಾಮನ ಜೀವನವು ನಮಗೆ ಎಚ್ಚರಿಕೆಯಾಗಿದೆ

**6. ನಾಯಕತ್ವ ಜನಹಿತದ ದಾರಿ**

ರಾಮನು ಒಳ್ಳೆಯ ನಾಯಕ ನಾಗಿದ್ದನು. ಅವನು ವಾನರ ಸೇನೆಯನ್ನು ಒಗ್ಗೂಡಿಸಿ, ಅವರಲ್ಲಿ ವಿಶ್ವಾಸ ಮೂಡಿಸಿ, ಧರ್ಮಕ್ಕಾಗಿ ಹೋರಾಡುವಂತೆ ಮಾಡಿದನು.

ನಾಯಕತ್ವ ಎಂದರೆ ಕೇವಲ ಅಧಿಕಾರವಲ್ಲ; ಅದು ಜವಾಬ್ದಾರಿ.ಒಳ್ಳೆಯ ನಾಯಕನು ತನ್ನ ತಂಡದವರನ್ನು ಪ್ರೇರೇಪಿಸುತ್ತಾನೆ, ಅವರಲ್ಲಿ ವಿಶ್ವಾಸ ಮೂಡಿಸುತ್ತಾನೆ.

ಇಂದಿನ ಸಮಾಜದಲ್ಲಿ ನಾಯಕತ್ವದ ಕೊರತೆ ಕಂಡುಬರುತ್ತಿದೆ.

ರಾಮನ ನಾಯಕತ್ವವು ನಮಗೆ ಮಾದರಿಯಾಗಿದೆ.

**7. ನ್ಯಾಯ ಮತ್ತು ಸಮಾನತೆ ಉತ್ತಮ ಸಮಾಜದ ಆಧಾರ**

ರಾಮರಾಜ್ಯವು ನ್ಯಾಯ ಮತ್ತು ಸಮಾನತೆಯ ಪ್ರತೀಕ. ರಾಮನು ಆಡಳಿತ ನಡೆಸಿದಾಗ ಎಲ್ಲರಿಗೂ ಸಮಾನ ನ್ಯಾಯ ದೊರೆಯುತ್ತಿತ್ತು.

ನ್ಯಾಯವು ಸಮಾಜದ ಸ್ಥಿರತೆಯನ್ನು ಕಾಯ್ದುಕೊಳ್ಳುತ್ತದೆ. ಸಮಾನತೆ ಸಮಾಜದಲ್ಲಿ ಶಾಂತಿಯನ್ನು ತರಲು ಸಹಾಯ ಮಾಡುತ್ತದೆ.

ಇಂದಿನ ಕಾಲದಲ್ಲಿ ಅನ್ಯಾಯ ಮತ್ತು ಅಸಮಾನತೆ ಹೆಚ್ಚುತ್ತಿರುವಾಗ, ರಾಮನ ಆಡಳಿತ ನಮಗೆ ಆದರ್ಶವಾಗಿದೆ.

**8. ಅಹಂಕಾರದ ನಿವಾರಣೆ ವಿನಯದ ಮಹತ್ವ**

ರಾಮನಲ್ಲಿ ಅಹಂಕಾರ ಇರಲಿಲ್ಲ. ಅವನು ಎಲ್ಲರೊಂದಿಗೆ ಸಮಾನವಾಗಿ ವರ್ತಿಸುತ್ತಿದ್ದನು.

ಆದರೆ ರಾವಣ ತನ್ನ ಅಹಂಕಾರದಿಂದಲೇ ನಾಶವಾಯಿತು. ಅಹಂಕಾರವು ವ್ಯಕ್ತಿಯ ಬೆಳವಣಿಗೆಯನ್ನು ತಡೆಯುತ್ತದೆ. ವಿನಯವು ವ್ಯಕ್ತಿಯನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ಯುತ್ತದೆ.

ಇಂದಿನ ಕಾಲದಲ್ಲಿ ಸ್ಥಾನಮಾನ ಮತ್ತು ಹಣ ಅಹಂಕಾರವನ್ನು ಹೆಚ್ಚಿಸುತ್ತವೆ. ಆದರೆ ವಿನಯವನ್ನು ಉಳಿಸಿಕೊಂಡರೆ ನಾವು ಹೆಚ್ಚು ಗೌರವವನ್ನು ಪಡೆಯಬಹುದು.

**9. ಭಕ್ತಿ ಮತ್ತು ನಂಬಿಕೆ ಆಂತರಿಕ ಶಕ್ತಿ**

ಹನುಮಂತನ ಭಕ್ತಿ ಮತ್ತು ಸೀತೆಯ ನಂಬಿಕೆ ರಾಮನ ಜೀವನದಲ್ಲಿ ದೈವಿಕತೆಯನ್ನು ತರುತ್ತವೆ.

ಭಕ್ತಿ ಎಂದರೆ ಕೇವಲ ಪೂಜೆ ಅಲ್ಲ; ಅದು ನಂಬಿಕೆ ಮತ್ತು ಸಮರ್ಪಣೆ.ನಂಬಿಕೆ ಇದ್ದರೆ ನಾವು ಯಾವುದೇ ಸಂಕಷ್ಟವನ್ನು ಎದುರಿಸಬಹುದು.

ಇಂದಿನ ಜೀವನದಲ್ಲಿ ಆತ್ಮವಿಶ್ವಾಸವೂ ಒಂದು ರೀತಿಯ ಭಕ್ತಿ. ನಮ್ಮ ಮೇಲೆ ನಂಬಿಕೆ ಇದ್ದರೆ ಯಶಸ್ಸು ಸಾಧ್ಯ.

**10. ಸಂಕಷ್ಟಗಳನ್ನು ಎದುರಿಸುವ ಧೈರ್ಯ ಜೀವನದ ಪರೀಕ್ಷೆ** ರಾಮನು ಅನೇಕ ಸಂಕಷ್ಟಗಳನ್ನು ಎದುರಿಸಿದನು ವನವಾಸ, ಸೀತೆಯ ಅಪಹರಣ, ಯುದ್ಧ.

ಆದರೆ ಯಾವಾಗಲೂ ಧೈರ್ಯ ಕಳೆದುಕೊಳ್ಳಲಿಲ್ಲ.

ಸಂಕಷ್ಟಗಳು ಜೀವನದ ಒಂದು ಭಾಗ. ಅವು ನಮ್ಮನ್ನು ಪರೀಕ್ಷಿಸುತ್ತವೆ. ಧೈರ್ಯದಿಂದ ಎದುರಿಸಿದರೆ ಸಂಕಷ್ಟವೇ ಸಾಧನೆಯ ದಾರಿಯಾಗುತ್ತದೆ.

ಇದು ರಾಮನ ಜೀವನದ ಪ್ರಮುಖ ಸಂದೇಶ.

**11. ಸರಳತೆ ಮತ್ತು ವಿನಯ ನಿಜವಾದ ಮಹತ್ವ**

ರಾಜಕುಮಾರನಾಗಿದ್ದರೂ ರಾಮನು ಸರಳವಾಗಿ ಬದುಕಿದನು. ಅವನು ಎಲ್ಲರೊಂದಿಗೆ ಸಮಾನವಾಗಿ ವರ್ತಿಸುತ್ತಿದ್ದನು. ಸರಳತೆ ವ್ಯಕ್ತಿತ್ವದ ಸೌಂದರ್ಯ. ವಿನಯವು ನಮ್ಮನ್ನು ಹೆಚ್ಚು ಜನಪ್ರಿಯರನ್ನಾಗಿ ಮಾಡುತ್ತದೆ. ಇಂದಿನ ಕಾಲದಲ್ಲಿ ಆರ್ಭಟ ಹೆಚ್ಚುತ್ತಿರುವಾಗ, ಸರಳತೆಯ ಮಹತ್ವವನ್ನು ರಾಮನ ಜೀವನ ನಮಗೆ ತಿಳಿಸುತ್ತದೆ.

**12. ಯುವಕರಿಗೆ ರಾಮನ ಸಂದೇಶ ಯಶಸ್ಸಿನ ನಿಜವಾದ ಅರ್ಥ**

ಇಂದಿನ ಯುವಜನತೆ ಯಶಸ್ಸನ್ನು ಹಣ ಮತ್ತು ಸ್ಥಾನಮಾನದಿಂದ ಅಳೆಯುತ್ತದೆ. ಆದರೆ ರಾಮನು ತೋರಿಸಿದ ಯಶಸ್ಸು ಒಳ್ಳೆಯ ವ್ಯಕ್ತಿಯಾಗುವುದು.

ಯುವಕರು ರಾಮನ ಜೀವನದಿಂದ ಶಿಸ್ತು, ನೈತಿಕತೆ, ಜವಾಬ್ದಾರಿ, ಆತ್ಮನಿಯಂತ್ರಣವನ್ನು ಕಲಿಯಬೇಕು. ಇವುಗಳು ಜೀವನದಲ್ಲಿ ಶಾಶ್ವತ ಯಶಸ್ಸನ್ನು ನೀಡುತ್ತವೆ. ಒಟ್ಟಿನಲ್ಲಿ ರಾಮನ ಜೀವನವು ಒಂದು ದೀಪದಂತೆ ನಮ್ಮ ದಾರಿಯನ್ನು ಬೆಳಗಿಸುತ್ತದೆ. ಅವನ ಮೌಲ್ಯಗಳು ಕೇವಲ ಪೌರಾಣಿಕ ಕಥೆಗಳಲ್ಲ; ಅವು ಜೀವನದ ನಿತ್ಯ ಸತ್ಯಗಳು. ನಾವು ಈ ಮೌಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಂಡರೆ:

ನಮ್ಮ ವ್ಯಕ್ತಿತ್ವ ಬೆಳೆಯುತ್ತದೆ

ಕುಟುಂಬದಲ್ಲಿ ಶಾಂತಿ ಮೂಡುತ್ತದೆ

ಸಮಾಜದಲ್ಲಿ ಸೌಹಾರ್ದತೆ ಹೆಚ್ಚುತ್ತದೆ

ಅಂತಿಮ ಸಂದೇಶ:

"ರಾಮನು ನಮ್ಮ ಹೃದಯದಲ್ಲಿ ಇದ್ದರೆ, ನಮ್ಮ ಜೀವನವೇ ರಾಮಾಯಣವಾಗುತ್ತದೆ." ಶುಭವಾಗಲಿ. ಶ್ರೀ ರಾಮ ಜಯರಾಮ ಜಯ ಜಯ ರಾಮ.

ಲೇಖನ
– ಪ್ರಶಾಂತ ಕುಲಕರ್ಣಿ
ಉಪನ್ಯಾಸಕರು
ಶ್ರೀಪದ್ಮರಾಜಶಿಕ್ಷಣ
ಮಹಾವಿದ್ಯಾಲಯ ಸಿಂದಗಿ
ವಿಜಯಪುರ ಜಿಲ್ಲೆ
ಮೊ: 9845442237



# ರಂಗಭೂಮಿಯು ಜೀವಂತ ಕಲೆಯ ತಾಣ

ಇಂದು (ಮಾರ್ಚ 27, ಶುಕ್ರವಾರ) "ವಿಶ್ವ ರಂಗಭೂಮಿ ದಿನಾಚರಣೆ" ಪ್ರಯುಕ್ತ ಈ ವಿಶೇಷ ಲೇಖನ

■ ಉದಯರಶ್ಮಿ ದಿನಪತ್ರಿಕೆ

ಖ್ಯಾತ್ ನಾಟಕಕಾರ ವಿಲಿಯಂ ಶೇಕ್ಸಪೀಯರ್ ರಂಗಭೂಮಿ ಎಂದರೆ ಕೇವಲ ಸ್ಥಳವಲ್ಲ, ಅದೊಂದು ಅನುಭವ, ಮನುಷ್ಯ-ಮನುಷ್ಯನಾಗಿ ಬದುಕುವುದನ್ನು ಕಲಿಯುವ, ಹಂಚಿಕೊಳ್ಳುವ ಶ್ರೇಷ್ಠ ಕಲೆಯಾಗಿದೆ" ಎಂದು ಹೇಳಿದ್ದಾರೆ.

ನಮ್ಮ ದೇಶೀಯ ನಾಟಕ, ರಂಗಭೂಮಿ, ನೃತ್ಯ, ಸಂಗೀತ ಮತ್ತು ಇತರ ಲಲಿತ ಕಲೆಗಳನ್ನು ಪ್ರೋತ್ಸಾಹಿಸುವುದು ಮತ್ತು ಆ ಎಲ್ಲ ಕಲೆಗಳ ಮೌಲ್ಯವನ್ನು ಜೀವನದಲ್ಲಿ ಅಳವಡಿಸಿಕೊಳ್ಳುವುದು ಈ ದಿನದ ಆಚರಣೆಯ ಪ್ರಮುಖ ಉದ್ದೇಶವಾಗಿದೆ.

ಅಷ್ಟೇ ಅಲ್ಲದೇ ಇಂದಿನ ಡಿಜಿಟಲ್ ಯುಗದಲ್ಲಿ ಲೈವ ಪ್ರದರ್ಶನ ನೀಡುವ ಕಾರ್ಯಕ್ರಮಗಳ ಕುರಿತು ನೆನಪಿಸುವುದು, ಮಹತ್ವವನ್ನು ತಿಳಿಸುವದು ಮತ್ತು ನಮ್ಮ ಸಂಸ್ಕೃತಿಯ ಪ್ರತಿಬಿಂಬವಾಗಿರುವ ದೇಶೀಯ ನಾಟಕದ ಸಂಸ್ಕೃತಿಯನ್ನು ಉಳಿಸಿ-ಬೆಳೆಸುವುದು ಇದರ ಮುಖ್ಯ ಆಶಯವಾಗಿದೆ.ಈ ದಿನದಂದು ಪ್ರಪಂಚದಾದ್ಯಂತ ವಿವಿಧ ನಾಟಕೋತ್ಸವ ಮತ್ತು ರಂಗ ಚಟುವಟಿಕೆಗಳನ್ನು





ಹಮ್ಮಿಕೊಂಡು ಕಲಾವಿದರಿಗೆ ಹೆಚ್ಚಿನ ಪ್ರೋತ್ಸಾಹ ನೀಡುವುದು ಮಹತ್ವದ್ದಾಗಿದೆ.

ವಿಶ್ವ ರಂಗಭೂಮಿ ದಿನದ ಆಚರಣೆಯ ಉದ್ದೇಶ

1961 ರಲ್ಲಿ ಅಂತರಾಷ್ಟ್ರೀಯ ರಂಗಭೂಮಿ ಸಂಸ್ಥೆ ಮಾರ್ಚ 27 ರಂದು ವಿಶ್ವ ರಂಗಭೂಮಿ ದಿನವನ್ನಾಗಿ ಆಚರಸಲು ಕರೆ ಕೊಟ್ಟಿತು. ಮನರಂಜನೆಯ ಮತ್ತು ನೈಜ ಕಲೆಯನ್ನು ಅಭಿವ್ಯಕ್ತಿಗೊಳಿಸುವ ಜಾನಪದ ಸಂಸ್ಕೃತಿಯನ್ನು ಉಳಿಸಿ-ಬೆಳೆಸಿಕೊಂಡು ಹೋಗಬೇಕೆಂಬ ಮಹೋನ್ನತ ಉದ್ದೇಶದಿಂದ ಪ್ರವರ್ಷ ಮಾರ್ಚ 27 ರಂದು ವಿಶ್ವ ರಂಗಭೂಮಿ ದಿನವನ್ನು ಆಚರಿಸಲಾಗುತ್ತಿದೆ.

ಆದರೆ ಇತ್ತೀಚಿನ ದಿನಗಳಲ್ಲಿ ವಿಜ್ಞಾನ-ತಂತ್ರಜ್ಞಾನ ಕ್ಷೇತ್ರದಲ್ಲಿ ಮೋಬೈಲ್ ಸಂಸ್ಕೃತಿ ಬಂದಾಗಿನಿಂದಲೂ ನಮ್ಮ ಪುರಾತನ, ಸಾಂಪ್ರದಾಯಿಕ ಕಲೆ, ಸಾಹಿತ್ಯ, ರಂಗಭೂಮಿ, ಜಾನಪದ ಸಂಸ್ಕೃತಿಗಳು ಕಣ್ಮರೆಯಾಗುತ್ತಿರುವುದು ಕಳವಳಕಾರಿ ಸಂಗತಿ. ವಿವಿಧತೆಯಲ್ಲಿ ಏಕತೆಯನ್ನು ಅಭಿವ್ಯಕ್ತಿಗೊಳಿಸುವ ನಮ್ಮ ದೇಶದ ಎಲ್ಲ ಕಲಾ ಪ್ರಕಾರಗಳನ್ನು ಪೋಷಿಸುವ ಕಾರ್ಯ ನಡೆಯಬೇಕಾಗಿದೆ. ಇಂದಿನ ಯುವ ಪೀಳಿಗೆಗೆ ನಾಟಕ, ರಂಗಭೂಮಿ ಕಲೆಗಳ ಬಗ್ಗೆ ಅರಿವು ಮೂಡಿಸಿ, ಆ ಕಲೆಗೆ ಸೂಕ್ತ ಬೆಲೆ ನೀಡಿ, ಗೌರವ ಕೊಟ್ಟು ಪೋಷಿಸುವದು ಇಂದಿನ ಅಗತ್ಯತೆಯಾಗಿದೆ.

ಸಾಮಾಜಿಕ ಜಾಗೃತಿ ಮತ್ತು ಮೌಲ್ವಿಕ ಸಂದೇಶ ನೀಡುವ ರಂಗಭೂಮಿ

ರಂಗಭೂಮಿಯಲ್ಲಿ ಮುಖ್ಯವಾಗಿ ವೃತ್ತಿ ರಂಗಭೂಮಿ ಕಲಾವಿದರು. ಹವ್ಯಾಸಿ ರಂಗಭೂಮಿ ಕಲಾವಿದರು ಎಂದು ಎರಡು ಪ್ರಕಾರಗಳಲ್ಲಿ ಕಾಣಬಹುದು. ಹಿಂದಿನ ಕಾಲದಲ್ಲಿ ಪ್ರತಿಯೊಂದು ಹಳ್ಳಿ-ಹಳ್ಳಿಯಲ್ಲಿ ವಿಶೇಷವಾದ ನಾಟಕ ಕಂಪನಿಗಳು ಇದ್ದವು. ನಮ್ಮ ಭವ್ಯ ಭಾರತದ ಸಂಸ್ಕೃತಿಯನ್ನು ಅಭಿವ್ಯಕ್ತಿಗೊಳಿಸುವ ರಾಮಾಯಣ, ಮಹಾಭಾರತ, ಶ್ರೀ ಕೃಷ್ಣ ಪಾರಿಜಾತ, ಪರಶುರಾಮ ಮಹಾತ್ಮೆ, ಸತ್ಯ ಹರಿಶ್ಚಂದ್ರ, ಕವಿರತ್ನ ಕಾಳಿದಾಸ, ಬಸವೇಶ್ವರ, ಲವ-ಕುಶ, ಹೇಮರಡ್ಡಿ ಮಲ್ಲಮ್ಮ, ಸತಿ ಸಕ್ಕುಬಾಯಿ, ರೇಣುಕಾ ಯಲ್ಲಮ್ಮ, ಸಿಂಧೂರ ಲಕ್ಷ್ಮಣ, ಸಂಗ್ಯಾ-ಬಾಳ್ಯಾ ಮುಂತಾದ ಜಾನಪದ ನಾಟಕಗಳು ನಮ್ಮ ಹಳ್ಳಿ ಜೀವನದಲ್ಲಿ ಕಾಣಸಿಗುತ್ತಿದ್ದವು. ಹಳೆಯ ಕಾಲದ ನಾಟಕ-ರಂಗಭೂಮಿ ನಮಗೆಲ್ಲ ಸತ್ಯ-ನ್ಯಾಯ, ನಿಷ್ಠುರತೆ, ಪ್ರಾಮಾಣಿಕತೆ, ನಡೆ-ನುಡಿ, ದೇಶಪ್ರೇಮದಂತಹ ಮೌಲ್ವಿಕ ಸಂದೇಶ ನೀಡುತ್ತಿದ್ದವು. ಆದರೆ ನಾವು ಇಂದು ಪಾಶ್ಚಾತ್ಯ ಸಂಸ್ಕೃತಿ, ಚಲನಚಿತ್ರ, ಧಾರವಾಹಿ ಮತ್ತು ಮೋಬೈಲ್ ಎಂಬ ಮಾಯಾ ಜಾಲದಲ್ಲಿ ಸಿಲುಕಿ, ಟ್ರ್ಯಾಕ್ಟರ್ ಅಶ್ಲೀಲ ಹಾಡು, ಮಿಕ್ಸಿಂಗ್-ಡಬ್ಬಿಂಗ್ ಮತ್ತು ಅರ್ಥಹೀನ ಮತ್ತು ದ್ವಂದ್ವಾರ್ಥಕ್ಕೆ (ಡಬಲ್‌ಮೀನಿಂಗ್) ಎಡೆಮಾಡಿಕೊಡುತ್ತ ಸಿನೇಮಾ, ನಾಟಕ ಮತ್ತು ಚಲನಚಿತ್ರ ಗೀತೆಗಳ ಹಾಡುಗಳಿಂದ ನಮ್ಮ ಸಾಂಪ್ರದಾಯಿಕ ಸಂಗೀತೆ-ಕಲೆಗಳು ನಶಿಸಿ ಹೋಗುತ್ತಿವೆ.

ರಂಗಭೂಮಿಗೆ ಬೇಕು ಆಶ್ರಯ ಮತ್ತು ಆರ್ಥಿಕ ಸಹಾಯ

ಪ್ರಸ್ತುತ ದಿನಗಳಲ್ಲಿ ರಂಗಭೂಮಿ ತನ್ನ ಪ್ರಾಮುಖ್ಯತೆಯನ್ನು ಕಳೆದುಕೊಳ್ಳುತ್ತಿದೆ. ಈ ನಿಟ್ಟಿನಲ್ಲಿ ಜಾಗತಿಕ ಮಟ್ಟದಲ್ಲಿ ರಂಗಭೂಮಿ ಮತ್ತು ಕಲಾವಿದರ ಪ್ರತಿಭೆಯನ್ನು ಗುರುತಿಸಿ, ಪ್ರೋತ್ಸಾಹಿಸಬೇಕು. ನಮ್ಮ ದೇಶದ ಪ್ರಾಚೀನ ಸಂಸ್ಕೃತಿ, ಲಲಿತಕಲೆಗಳು, ನಾಟಕ, ರಂಗಭೂಮಿ, ಭರತನಾಟ್ಯ, ಕಥಕ್, ಕುಚಿಪುಡಿ, ಯಕ್ಷಗಾನ, ಲಾವಣಿ, ಕೋಳಿ ಗೀತ, ಬಿಹೋ ಮುಂತಾದ ದೇಶೀಯ ಕಲೆಗಳ ಸಂರಕ್ಷಣೆ ಮಾಡುತ್ತಾ, ಮುಂದಿನ ಜನಾಂಗಕ್ಕೆ ನಮ್ಮ ರಂಗಭೂಮಿ ಕಲೆ, ಪ್ರತಿಭೆ ಉಳಿಯಲು ವೇದಿಕೆ ಕಲ್ಪಿಸಿ ಕೊಡಬೇಕು. ಈ ರಂಗಭೂಮಿ ಕಲಾ ಮಾಧ್ಯಮದಿಂದ ಸಮಾಜದಲ್ಲಿನ ಓರೆ-ಕೋರೆಗಳನ್ನು ತಿದ್ದುತ್ತಾ, ಒಂದು ಒಳ್ಳೆಯ ಸಂದೇಶದೊಂದಿಗೆ ಮೌಲ್ಯಯುತವಾದ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ನಾಟಕ ಮತ್ತು ರಂಗಭೂಮಿಯ ಪ್ರಾಮುಖ್ಯತೆಯನ್ನು ರಕ್ಷಿಸಬೇಕಾಗಿದೆ. ತಮ್ಮ ಇಡೀ ಜೀವನವನ್ನೇ ನಾಟಕ ಮತ್ತು ರಂಗಭೂಮಿಗಾಗಿ ತ್ಯಾಗ ಮಾಡಿದ ಅದೇಷ್ಟೋ ಕಲಾವಿದರು ಇಂದು ನೆಲೆ ಕಳೆದುಕೊಂಡು ಅನಾಥವಾಗಿದ್ದಾರೆ.

ಇಂದು ಅದೇಷ್ಟೋ ರಂಗಭೂಮಿ ಮತ್ತು ಕಂಪನಿ ನಾಟಕಗಳ ಕಲಾವಿದರ ಒಂದು ಹೊತ್ತಿನ ಊಟಕ್ಕೂ ಕಷ್ಟಸಾಧ್ಯ ಎಂಬಂತಹ ಪರಿಸ್ಥಿತಿಯಿದೆ. ನಮಗೆ ಮನರಂಜನೆಗಾಗಿ ಹಲವು ಮಾಧ್ಯಮಗಳಿದ್ದರೂ ಸೃಜನಶೀಲತೆಯನ್ನು ಹೊರ ಹಾಕುವ ಮತ್ತು ಅರಳಿಸುವ ಪಾತ್ರವನ್ನು ರಂಗಭೂಮಿಯು ಮಾಡುತ್ತದೆ. ಆಧುನಿಕ ದೃಶ್ಯ ಮಾಧ್ಯಮಗಳ ಪ್ರಭಾವದಿಂದ ನಮ್ಮ ಮೂಲ ರಂಗಭೂಮಿ ಮತ್ತು ನಾಟಕ ಸಂಸ್ಕೃತಿ ಮಾಯವಾಗುತ್ತಿರುವುದು ಆತಂಕಕಾರಿ ಬೆಳವಣಿಗೆಯಾಗಿದೆ.

ಮೌಲ್ವಿಕ, ನೈತಿಕ ಮತ್ತು ವೈಚಾರಿಕತೆಯ ಸಂದೇಶ ನೀಡುವ ನಾಟಕ ಮತ್ತು ರಂಗಭೂಮಿ ಕಲೆಗಳನ್ನು ಪ್ರೋತ್ಸಾಹಿಸುವ ಕಾರ್ಯ ನಡೆಯಬೇಕಾಗಿದೆ. ಇಡೀ ಜಗತ್ತಿಗೆ ಶ್ರೇಷ್ಠ ನಟ, ನಟಿ, ಕಲಾವಿದರನ್ನು ಕೊಡುಗೆಯಾಗಿ ನೀಡಿದ ಅಂತರಾಷ್ಟ್ರೀಯ ರಂಗಭೂಮಿ ಸಂಸ್ಥೆಗಳು, ಮೈಸೂರು ನೀನಾಸಂ, ಧಾರವಾಡ ರಂಗಾಯಣ, ಬೆಂಗಳೂರಿನ ಗುಬ್ಬಿ ವೀರಣ್ಣ ನಾಟಕ ಕಂಪನಿಗಳ ರಕ್ಷಣೆಯಾಗಬೇಕು. ಪಾಶ್ಚಾತ್ಯ ಸಂಸ್ಕೃತಿ ಮತ್ತು ಅಶ್ಲೀಲ ಸಾಹಿತ್ಯದತ್ತ ಮುಖ ಮಾಡುತ್ತಿರುವ ನಮ್ಮ ಯುವಕರಲ್ಲಿ ಮೌಲ್ಯಾಧಾರಿಕ ಮತ್ತು ಸಮಾಜಮುಖಿ ಸಂದೇಶವಾಹಕ ನಾಟಕಗಳನ್ನು ಮತ್ತು ರಂಗಭೂಮಿಯನ್ನು ಸಂರಕ್ಷಿಸುವ ಕಾರ್ಯ ಜಾನಪದ ನಾಟಕ ಅಕ್ಯಾಡೆಮಿಗಳಿಂದ ನಡೆಯಬೇಕು. ಭಾವ ಲಹರಿ,



ಸಂವೇದನಾಶೀಲತೆ ಮತ್ತು ಸಮಾಜದಲ್ಲಿನ ಅನಿಷ್ಠಗಳನ್ನು ಪ್ರತಿಬಿಂಬಿಸುವ ನಮ್ಮ ರಂಗಭೂಮಿ ಮತ್ತು ನಾಟಕ ಸಂಸ್ಕೃತಿಯನ್ನು ಜೀವಂತವಾಗಿಡುವದು, ರಂಗಭೂಮಿಯ ಮಹತ್ವವನ್ನು ಸ್ನೇಹಿತರು ಮತ್ತು ಕುಟುಂಬ ಸದಸ್ಯರೊಂದಿಗೆ ಹಂಚಿಕೊಳ್ಳುವುದು ಇಂದಿನ ಅಗತ್ಯತೆಯಾಗಿದೆ. ಡಿಜಿಟಲೀಕರಣ ಈ ಕಾಲಘಟ್ಟದಲ್ಲಿ ಅಳಿವಿನ ಅಂಚಿನಲ್ಲಿರುವ ವೃತ್ತಿ ರಂಗಭೂಮಿ ಕಲಾವಿದರನ್ನು ಮತ್ತು ಹವ್ಯಾಸಿ ರಂಗಭೂಮಿ ಕಲಾವಿದರನ್ನು ಪೋಷಿಸಿ-ಪ್ರೋತ್ಸಾಹಿಸುವ ನಿಟ್ಟಿನಲ್ಲಿ ನಾವೆಲ್ಲರೂ ಮಾರ್ಚ 27 ರಂದು ಸಮಾಜದಲ್ಲಿ ಜನಜಾಗೃತಿ ಮೂಡಿಸುವುದು ಮತ್ತು ಕಲೆಗೆ ಸೂಕ್ತ ಬೆಲೆ ನೀಡುವ ಕಾರ್ಯ ನಮ್ಮಿಂದಾಗಬೇಕು. ಈ ದಿನದಂದು ಪ್ರಪಂಚದಾದ್ಯಂತ ರಂಗಭೂಮಿಯ ಮಹತ್ವವನ್ನು ಎತ್ತಿ ತೋರಿಸುವ ಮತ್ತು ನಾಟಕ ಕಂಪನಿಗಳಿಗೆ ಉತ್ತೇಜನ ನೀಡುವಂತಹ ದಿಶೆಯನ್ನು ನಾವೆಲ್ಲರೂ ಶ್ರಮಿಸಬೇಕಾಗಿದೆ.

2026 ನೇಯ ವರ್ಷದ ಘೋಷವಾಕ್ಯ

ಅಮೇರಿಕಾದ ಖ್ಯಾತ್ ನಟ ಮತ್ತು ರಂಗಭೂಮಿ ಕಲಾವಿದ ವಿಲಿಯಂ ಡಫೋಯಿ ಅವರು ಈ ವರ್ಷದ ರಂಗಭೂಮಿ ದಿನದ ಘೋಷವಾಕ್ಯ "ರಂಗಭೂಮಿ ಮತ್ತು ಸಂಸ್ಕೃತಿ-ಶಾಂತಿಯ ಪ್ರತೀಕ" ಎಂಬಥ-ರ್ದಲ್ಲಿ ಪ್ರಚುರಪಡಿಸಿ, ವಿಶ್ವದಾದ್ಯಂತ ರಂಗಭೂಮಿಯಿಂದ ಸಂಸ್ಕೃತಿ ಮತ್ತು ಶಾಂತಿ ನೆಲ್ಲೆಗೊಳ್ಳಲೆಂಬುದೇ ಇದರ



ಧ್ಯೇಯವಾಗಿದೆ. ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಹಂತದ ಶಿಕ್ಷಣದಲ್ಲಿ ಮಕ್ಕಳಲ್ಲಿ ನಾಟಕ, ರಂಗಭೂಮಿ ಮತ್ತು ಜಾನಪದ ಕಲೆ, ಪ್ರತಿಭೆಗಳು ಒಡಮೂಡುವಂತೆ ಪ್ರೇರೇಪಣೆ ಕಾರ್ಯ ನಡೆಯಬೇಕು. ಇದು ಕೇವಲ ಮನರಂಜನೆಯಲ್ಲ. ಬದಲಾಗಿ ಸಮಾಜದ ಪ್ರತಿಬಿಂಬ, ಸಾಂಸ್ಕೃತಿಕ ವಿನಿಮಯ ಮತ್ತು ಸಂವೇದನೆಗಳನ್ನು ಎಚ್ಚರಿಸುವ ಸಶಕ್ತ ಮಾಧ್ಯಮವಾಗಿದೆ. ಆದ್ದರಿಂದ ನಮ್ಮ ದೇಶೀಯ ಕಲೆ, ಸಂಸ್ಕೃತಿ ಮತ್ತು ಬದುಕಿನ ಸಂಕೇತವಾಗಿರುವ ರಂಗಭೂಮಿಯನ್ನು ಪ್ರೀತಿಸೋಣ ಮತ್ತು ಉಳಿಸಿ-ಬೆಳಸೋಣ.

**ಕೊನೆಯ ನುಡಿ**

ನಾವು ಪ್ರತಿದಿನ ಹಾಸ್ಯ, ದುರಂತ, ಸಂಗೀತ, ನಾಟಕ ಮತ್ತು ರಂಗಭೂಮಿಯಲ್ಲಿ ನಡೆಯುವ



ಕಲಾ ಪ್ರದರ್ಶನಗಳನ್ನು ವೀಕ್ಷಿಸಿ, ನಮ್ಮ ದೇಶದ ಜಾನಪದ ಮತ್ತು ನಾಟಕ ಸಂಸ್ಕೃತಿಗೆ ಕನಿಷ್ಠ ಮಾರ್ಚ 27 ರಂದು ಕಲಾ ಪ್ರಕಾರಗಳನ್ನು ನೋಡುವುದದರ ಮೂಲಕ ಗೌರವ ಸಲ್ಲಿಸುವಂತಾಗಬೇಕು. ನಷ್ಟದಲ್ಲಿರುವ ಮತ್ತು ಅವನತಿ ಹಂತದಲ್ಲಿರುವ ರಂಗಭೂಮಿ ಮತ್ತು ನಾಟಕ ಕಂಪನಿಗಳಿಗೆ ಆರ್ಥಿಕ ನೆರವು ನೀಡಿ, ಅವು ಇನ್ನಷ್ಟು ಅಭಿವೃದ್ಧಿ ಹೊಂದಲು ಸರ್ಕಾರ ಮತ್ತು ಸಾರ್ವಜನಿಕರು ಮತ್ತು ಸರ್ಕಾರೇತರ ಸಂಸ್ಥೆಗಳು ಅಗತ್ಯ ಹಣಕಾಸಿನ ನೆರವು ನೀಡಬೇಕು. ಬದುಕಿಗಾಗಿ ರಂಗಭೂಮಿಯಲ್ಲಿ ಕಲಾವಿದರಾಗಿ ತೊಡಗಿಸಿಕೊಂಡ ಮತ್ತು ರಂಗಭೂಮಿ ಹಿನ್ನೆಲೆಯಿಂದ ಬಂದು ಸಿನಿಮಾ ರಂಗಕ್ಕೆ ಲಗ್ಗೆ ಇಟ್ಟು ಬದುಕಿ ಕಟ್ಟಿಕೊಂಡ ವೃತ್ತಿ ಮತ್ತು ಹವ್ಯಾಸಿ ಕಲಾವಿದರು ಮಾಡಿದ ನಾಟಕವನ್ನು ನೋಡಬೇಕು. ರಂಗ ಕಲೆಯನ್ನು ಉಳಿಸುವ ಸಲುವಾಗಿ ದೇಶದಲ್ಲಿರುವ ಸಾಕಷ್ಟು ರಂಗಭೂಮಿ ತರಬೇತಿ ಕೇಂದ್ರಗಳು ಹಲವಾರು ಪ್ರತಿಭೆಗಳಿಗೆ ಅವಕಾಶ ನೀಡಿ ರಂಗ ಚಟುವಟಿಕೆಗಳಲ್ಲಿ ಸಕ್ರಿಯವಾಗಬೇಕು ಮತ್ತು ಈ ರಂಗ ಕಲೆಯನ್ನು ಪ್ರೋತ್ಸಾಹಿಸಿ ಉಳಿಸಿ-ಬೆಳೆಸುವ ಕಾರ್ಯ ನಡೆಯಬೇಕು.

ಲೇಖನ
– ಮಲ್ಲಪ್ಪ. ಸಿ. ಖೊದ್ನಾಪೂರ
(ತಿಕೋಟಾ)
ವಿಜಯಪುರ ಜಿಲ್ಲೆ



## ಪಿಂಚಣಿ ಮಸೂದೆ ಜಾರಿಗೆ ವಿರೋಧಿಸಿ ಕಪ್ಪುಪಟ್ಟಿ ಧರಿಸಿ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ

ಬಸವನಬಾಗೇವಾಡಿ: ತಾಲೂಕಿನ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಪದಾಧಿಕಾರಿಗಳು, ಸದಸ್ಯರು ಕೇಂದ್ರ ಸರ್ಕಾರ ಪಿಂಚಣಿ ಮಸೂದೆ ಜಾರಿಗೆ ವಿರೋಧಿಸಿ ಕಪ್ಪು ಪಟ್ಟಿ ಧರಿಸಿ ಪ್ರತಿಭಟನಾ ದಿನಾಚರಣೆಯ ಆಚರಿಸಿ ಪ್ರಧಾನ ಮಂತ್ರಿಗಳಿಗೆ ಬರೆದ ಮನವಿ ಪತ್ರವನ್ನು ಬುಧವಾರ ತಹಸೀಲ್ದಾರ ಮೂಲಕ ಸಲ್ಲಿಸಿದರು.

ಮನವಿ ಪತ್ರ ಸಲ್ಲಿಸುವ ಮುನ್ನ ಬಸವೇಶ್ವರ ದೇವಸ್ಥಾನದ ಆವರಣದಲ್ಲಿ ಜಮಾಯಿಸಿ ಸಭೆ ನಡೆಸಿದ ಅವರು ನಂತರ ಪ್ರತಿಭಟನೆ ಮೆರವಣಿಗೆ ಮೂಲಕ ತಹಸೀಲ್ದಾರ ಕಚೇರಿಗೆ ತೆರಳಿ ಮನವಿ ಪತ್ರವನ್ನು ಸಲ್ಲಿಸಿದರು.

ಈ ಸಂದರ್ಭದಲ್ಲಿ ರಾಜ್ಯ ಪರಿಷತ್ ಸದಸ್ಯ ಆರ್.ಜಿ.ಅಳ್ಳಗಿ, ತಾಲೂಕಾಧ್ಯಕ್ಷ ಎಫ್.ಡಿ.ಮೇಟಿ, ತಾಲೂಕು ಕಾರ್ಯದರ್ಶಿ ಎಸ್.ಕೆ.ಸೋಮನಕಟ್ಟಿ ಮಾತನಾಡಿ, ಕೇಂದ್ರ ಸರ್ಕಾರವು ಪಿಂಚಣಿದಾರರನ್ನು ವರ್ಗೀಕರಿಸುವ ಮತ್ತು ಪಿಂಚಣಿ ವ್ಯತ್ಯಾಸಗಳನ್ನು ಕಾಯ್ದುಕೊಳ್ಳುವ ವಿವಾದಾತ್ಮಕ ಕ್ರಮವನ್ನು ಜಾರಿಗೆ ತಂದಿರುವುದನ್ನು ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘವು ತೀವ್ರ ಆಕ್ರೋಶ ವ್ಯಕ್ತಪಡಿಸುತ್ತದೆ. ಈ ಕಾಯ್ದೆಯ



ಜಾರಿಯಿಂದಾಗಿ ನಿವೃತ್ತಿಯ ದಿನಾಂಕದ ಆಧಾರದ ಮೇಲೆ ಪಿಂಚಣಿದಾರರನ್ನು ವರ್ಗೀಕರಿಸಲಾಗುತ್ತದೆ. ಇದರಿಂದಾಗಿ ಕೇಂದ್ರವೇತನ ಆಯೋಗದ ಶಿಫಾರಸುಗಳ ಪ್ರಯೋಜನಗಳು ಹಳೆಯ ಪಿಂಚಣಿದಾರರಿಗೆ ಸಿಗದೆ ಹೋಗುವ ಆತಂಕವಿದೆ. ಇದು ಸಂವಿಧಾನಾತ್ಮಕವಾಗಿ ದೊರೆತಿರುವ ನ್ಯಾಯಯುತ ಹಕ್ಕುಗಳ ಉಲ್ಲಂಘನೆಯಾಗಿದೆ. ಪಿಂಚಣಿ ಎಂಬುದು ಸಾಮಾಜಿಕ ಕಲ್ಯಾಣ ಕ್ರಮವಾಗಿದ್ದು. ಅದು ನಿವೃತ್ತರ ಜೀವನಕ್ಕೆ ಆರ್ಥಿಕ ಭದ್ರತೆ ಒದಗಿಸುತ್ತದೆ ಎಂಬ ನ್ಯಾಯಾಲಯದ ಆದೇಶಕ್ಕೆ ಈಗಿನ ಕೇಂದ್ರ ಸರ್ಕಾರದ ಧೋರಣೆ ವಿರುದ್ಧವಾಗಿದೆ. ಕೂಡಲೇ ಈ ಕಾಯ್ದೆಯನ್ನು ಹಿಂಪಡೆಯುವಂತೆ ಗೌರವಾನ್ವಿತ ಪ್ರಧಾನ ಮಂತ್ರಿ ನರೇಂದ್ರ ಮೋದಿ ಅವರಿಗೆ ಮನವಿ ಸಲ್ಲಿಸಲಾಗುತ್ತಿದೆ ಎಂದರು. ಶಿರಸ್ತೇದಾರ ಎ. ಎಚ್. ಬಳೂರಗಿ ಅವರು ಮನವಿ ಪತ್ರವನ್ನು ಸ್ವೀಕರಿಸಿದರು.

ಪ್ರತಿಭಟನೆಯಲ್ಲಿ ಎಸ್. ಜಿ.ಮೋಖಾಸಿ, ಎಸ್.ಎ.ದೇಗಿನಾಳ, ಎಸ್. ಬಿ.ಪಾಟೀಲ, ಶರಣಪ್ಪ ಮಾದರ, ಎಂ.ಎಸ್. ಪತ್ತಾರ, ಎಸ್.ಎಲ್.ಓಂಕಾರ, ಕೃಷ್ಣಾ ಬಡಿಗೇರ, ಎಂ.ಜಿ ಆದಿಗೊಂಡ,ಎಸ್.ಎಸ್.ಹಿಟ್ನಳ್ಳಿ, ಎಸ್.ಜಿ.ಪಾಟೀಲ, ಎನ್.ಎನ್.ಹೊಸಮನಿ, ಎಸ್. ಬಿ. ಬಸೆಟ್ಟಿ, ಎಲ್.ಎನ್.ನಾಯಕೋಡಿ, ಕೆ.ಎ.ಮುಲ್ಲಾ, ಎಸ್.ಜಿ.ಹಾದಿಮನಿ,ವೈ.ಎಸ್. ಶಿವಣಗಿ, ಎಚ್.ಎಂ. ನಧಾಪ ಸೇರಿದಂತೆ ಇತರರು ಭಾಗವಹಿಸಿದ್ದರು.

## ವಿವಿಧ ಬೇಡಿಕೆಗಳ ಈಡೇರಿಕೆಗೆ ಡಿಎಸ್ ಧರಣಿ ಸತ್ಯಾಗ್ರಹ

■ ಉದಯರಶ್ಮಿ ದಿನಪತ್ರಿಕೆ

ಬಸವನಬಾಗೇವಾಡಿ: ಪಟ್ಟಣದ ಮಿನಿವಿಧಾನಸೌಧದ ಆವರಣಗೋಡೆ ಮುಂಭಾಗ ಕರ್ನಾಟಕ ದಲಿತ ಸಂಘರ್ಷ ಸಮಿತಿ(ಪ್ರೊ.ಕೃಷ್ಣಪ್ಪ ಬಣ) ಯ ಪದಾಧಿಕಾರಿಗಳು,ಕಾರ್ಯಕರ್ತರು ವಿವಿಧ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಮಂಗಳವಾರ ಧರಣಿ ಸತ್ಯಾಗ್ರಹ ನಡೆಸಿದರು.

ಈ ಸಂದರ್ಭದಲ್ಲಿ ಡಿಎಸ್ ಜಿಲ್ಲಾ ಸಂಚಾಲಕ ಅರವಿಂದ ಸಾಲವಾಡಗಿ ಮಾತನಾಡಿ, ಪಟ್ಟಣದ ಇಂಗಳೇಶ್ವರ ರಸ್ತೆಯಲ್ಲಿ ಪುರಸಭೆಯಿಂದ ವಾಜಪೇಯಿ ನಗರ ವಸತಿ ಯೋಜನೆಯಲ್ಲಿ ಜಿ ಪ್ಲಸ್ ಮಾದರಿಯಲ್ಲಿ ನಿರ್ಮಾಣ ಮಾಡಿರುವ ಮನೆಗಳು ಕಳಪೆ ಗುಣಮಟ್ಟದಿಂದ ನಿರ್ಮಾಣವಾಗಿವೆ. ಈ ಮನೆಗಳನ್ನು ಗುಣಮಟ್ಟದಿಂದ ನಿರ್ಮಾಣ ಮಾಡಿದ ನಂತರ ಈ ಯೋಜನೆಯ ಫಲಾನುಭವಿಗಳಿಗೆ ಮನೆ ಹಂಚಿಕೆ ಮಾಡಬೇಕು. ಪುರಸಭೆಯಿಂದ ಮನೆ ಹಂಚಿಕೆಯಲ್ಲಿ ಸರ್ಕಾರದ ಮೀಸಲಾತಿ ನಿಯಮ ಸರಿಯಾಗಿ ಮಾಡದೇ ಹಂಚಿಕೆ ಮಾಡಲಾಗಿದೆ. ಸರ್ಕಾರದ ನಿಯಮದ ಪ್ರಕಾರ ತಾಲೂಕು ಮಟ್ಟದ ಅಧಿಕಾರಿಗಳು ತಾಲೂಕು ಕೇಂದ್ರದಲ್ಲಿ ವಾಸವಾಗಿರಬೇಕು. ಯಾವುದೇ



ತಾಲೂಕು ಮಟ್ಟದ ಅಧಿಕಾರಿಗಳು ತಾಲೂಕು ಕೇಂದ್ರದಲ್ಲಿ ವಾಸವಾಗಿರುವದಿಲ್ಲ. ಇದರಿಂದಾಗಿ ಸಾರ್ವಜನಿಕರಿಗೆ ಸಕಾಲದಲ್ಲಿ ಅಧಿಕಾರಿಗಳು ಸಿಗುವುದಿಲ್ಲ. ಇದರಿಂದಾಗಿ ಸಾರ್ವಜನಿಕರು ತೊಂದರೆ ಅನುಭವಿಸುವಂತಾಗಿದೆ ಎಂದ ಅವರು, ತಾಲೂಕಿನ 15 ಗ್ರಾಮ ಪಂಚಾಯಿತಿಗಳ್ಲಿ ವರ್ಗ 1 ರಲ್ಲಿನ ಹಣ ಖರ್ಚು ಮಾಡಿದ್ದರ ಕುರಿತು ತನಿಖೆಯಾಗಬೇಕು.ಅಮೃತ ಸರೋವರ ಯೋಜನೆಯಡಿ ಕೈಗೊಂಡ ಕಣಕಾಲ ಗ್ರಾಮದ ಕೆರೆ ಅಭಿವೃದ್ಧಿ ಕಾಮಗಾರಿ ಕಳಪೆಯಾಗಿದೆ ಸೇರಿದಂತೆ ನಮ್ಮ ಸಂಘಟನೆಯು ಅನೇಕ ಬೇಡಿಕೆಗಳನ್ನು ಮುಂದಿಟ್ಟುಕೊಂಡು ಧರಣಿ ಮಾಡಲಾಗುತ್ತಿದೆ. ಅಧಿಕಾರಿಗಳು ನಮ್ಮ ಬೇಡಿಕೆಗಳನ್ನು ಈಡೇರಿಸುವಂತೆ ಆಗ್ರಹಿಸಿದರು.

ಧರಣಿಯಲ್ಲಿ ಮುಖಂಡರಾದ ಅಶೋಕ ಕೊರವೇರ, ಪ್ರಕಾಶ ನಾಟೀಕಾರ, ರಮೇಶ ಭಜಂತ್ರಿ, ಸಾವಿತ್ರಿ ಕೊರವೇರ, ಸವಿತಾ ತಳೇವಾಡ, ಹಣಮಂತ್ರಾಯ ಬಸರಡ್ಡಿ, ಮಲ್ಲಣ್ಣ ದಯಾರನಹಳ್ಳಿ, ವಿಠ್ಠಲ ಈಳಗೇರ, ವಿಶ್ವನಾಥ ಹೂಗಾರ, ಮಹಾದೇವಿ ಮಾದರ, ಲಕ್ಷ್ಮೀಬಾಯಿ ಮಾದರ, ಅನಿತಾ ಮಾದರ, ಯಲ್ಲವ್ವ ಮಾದರ, ರಜಾಕಬಿ ತಾಂಬೋಳಿ, ಭೀಮರಾಮ ಮಾಸ್ತಿ, ಪ್ರಭು ದಳವಾಯಿ, ಮೌನೇಶ ಹೆಬ್ಬಾಳ, ಫಯಾಜ ದೇಗಿನಾಳ ಇತರರು ಇದ್ದರು.

## ದೇವಗಿರಿ ಯಾದವ ರಾಜರ ಗಜಪಡೆಯ ಉಬ್ಬು ಶಿಲ್ಪ ಪತ್ತೆ

■ ಉದಯರಶ್ಮಿ ದಿನಪತ್ರಿಕೆ

ವಿಜಯಪುರ: ವಿಜಯಪುರದ ಗೌಡಗೆರೆ ಹಳ್ಳಿಯಲ್ಲಿ ಎದುರು -ಬದುರು ನಿಂತು ಕಾಳಗ ಮಾಡುವ ಮದಗಜಗಳಅಪರೂಪದಉಬ್ಬು ಶಿಲ್ಪ ಪತ್ತೆಯಾಗಿದ್ದು,ರಾಷ್ಟ್ರೀಯ ಸಂಶೋಧನಾ ವೇದಿಕೆಯಿಂದ ಹಮ್ಮಿಕೊಂಡಿದ್ದ ಕ್ಷೇತ್ರ ಕಾರ್ಯದಲ್ಲಿ ಉಬ್ಬು ಶಿಲ್ಪವನ್ನು ಸಂಶೋಧಿಸಲಾಗಿದೆ. ಇದೇ ಮೊದಲ ಬಾರಿಗೆ ಇಂತಹ ಅಪರೂಪದ ಶಿಲ್ಪ ಪತ್ತೆಯಾಗಿದ್ದು, ಇದನ್ನು ಇತಿಹಾಸ ಸಂಶೋಧಕ ಹಾಗೂ ರಾಷ್ಟ್ರೀಯ ಸಂಶೋಧನಾ ವೇದಿಕೆಯ ಅಧ್ಯಕ್ಷ ಲಾಯಪ್ಪ ಇಂಗಳೆ ಅವರು ಗುರುತಿಸಿದ್ದಾರೆ.



ದೇವಗಿರಿ ಯಾದವರು ಎಂದು ಹೆಸರುವಾಸಿಯಾದ ಸೇವುಣರ ರಾಜ್ಯಧಾನಿ ಗೌಡಗೆರೆ ಹಳ್ಳಿಗೆ ಸೇರಿದ ಕೋಟೆಯಲ್ಲಿ ಕೆತ್ತಲಾದ ಮದಗಜಗಳ ಉಬ್ಬು ಶಿಲ್ಪವು ರಾಜಧಾನಿ ರಕ್ಷಣೆಗೆ ಶಕ್ತಿಶಾಲಿ ಗಜಪಡೆ, ಮತ್ತು ರಕ್ಷಣಾ ವ್ಯವಸ್ಥೆ ಹೊಂದಿರುವುದಕ್ಕೆ ಸಾಕ್ಷಿಯಾಗಿದೆ. ಎಂದು ಇತಿಹಾಸಕಾರ ಲಾಯಪ್ಪ ಇಂಗಳೆ ಅವರು ತಿಳಿಸಿದ್ದಾರೆ.

ಕ್ಷೇತ್ರಕಾರ್ಯದಲ್ಲಿ ರಾಷ್ಟ್ರೀಯ ಸಂಶೋಧನಾ ವೇದಿಕೆಯ ಪ್ರಮುಖರಾದ ಬಸವರಾಜ ಕುಬಕಡ್ಡಿ, ಉಮೇಶ ಶಿವಶರಣ ಭೀಮರಾಯ ಕುಂಟೋಜಿ ಪ್ರಶಾಂತಗೌಡ ಪಾಟೀಲ ಉಪಸ್ಥಿತರಿದ್ದರು.

## ರಾಷ್ಟ್ರಕವಿ ಶಿವರುದ್ರಪ್ಪನವರು ಕನ್ನಡದ ಅಸ್ಮಿತೆ :ಪ್ರೊ.ಮೇತ್ರಿ

■ ಉದಯರಶ್ಮಿ ದಿನಪತ್ರಿಕೆ

ಸಿಂದಗಿ: ಪ್ರೀತಿಯ ಪದಕೋಶಕ್ಕೆ ಹೊಸ ಭಾಷ್ಯಯನ್ನು ಸೇರಿಸಿದ ನಲಮೆಯ ಕವಿ ಶಿವರುದ್ರಪ್ಪನವರು ರಾಷ್ಟ್ರಕವಿಯಾಗಿ ಕನ್ನಡದ ಅಸ್ಮಿತೆಯಾಗಿದ್ದರು ಎಂದು ಪ್ರೊ. ಮಲ್ಲಿಕಾರ್ಜುನ ಮೇತ್ರಿ ಹೇಳಿದರು.

ಅವರು ತಾಲ್ಲೂಕಿನ ರಾಂಪೂರ ಆರೂಢಮಠ

ಕರ್ನಾಟಕ ಸಾಹಿತ್ಯ ಅಕಾಡೆಮಿ, ಚಕೋರ ಸಾಹಿತ್ಯ ವೇದಿಕೆ ಮತ್ತು ಸರಕಾರಿ ಪ್ರಥಮ ದರ್ಜೆ ಕಾಲೇಜು ಸಿಂದಗಿ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಸಮನ್ವಯ ಕವಿ ಡಾ.ಜಿ.ಎಸ್.ಶಿವರುದ್ರಪ್ಪ ವಿಶೇಷ ಉಪನ್ಯಾಸ ನೀಡಿದರು.

ದೇಸಿನೆಲೆಯಲ್ಲಿ ಕನ್ನಡವನ್ನು ಬೆಳೆಸಿದ ಕೀರ್ತಿ ಜಿಎಸ್.ಎಸ್ ಅವರಿಗೆ ಸಲ್ಲುತ್ತದೆ, ಜಾಗತಿಕ ಸಾಹಿತ್ಯಕ್ಕೆ ಕನ್ನಡವನ್ನು ಪ್ರತಿನಿಧಿಸುವ ಮೇರು ಅವರಾಗಿದ್ದರು ಎಂದರು.



ಪ್ರಾಸ್ತಾವಿಕವಾಗಿ ಮಾತನಾಡಿದ ಸಾಹಿತ್ಯ ಅಕಾಡೆಮಿಯ ಚಕೋರ ವೇದಿಕೆಯ ಸಂಚಾಲಕ ಶಂಕರ ಬೈಚಬಾಳ ಮಾತನಾಡಿದರು. ಕಾರ್ಯಕ್ರಮವನ್ನು ಜ್ಯೋತಿ ಬೆಳಗಿಸಿ ಉದ್ಘಾಟಿಸಿದ ಆರೂಢಮಠದ ನಿತ್ಯಾನಂದ ಮಹಾರಾಜರು ಮಾತನಾಡಿದರು.ಅಧ್ಯಕ್ಷತೆ ವಹಿಸಿದ ಕಾಲೇಜಿನ ಪ್ರಾಚಾರ್ಯ ಡಾ. ಎಸ್ ಎಸ್. ಹಳಮನಿ ಮಾತನಾಡಿ ' ಸಾಹಿತ್ಯಿಕ ಕಾರ್ಯಕ್ರಮಗಳನ್ನು ಆಯೋಜಿಸುವ ಮುಖ್ಯ ಉದ್ದೇಶ ವಿದ್ಯಾರ್ಥಿಗಳಲ್ಲಿ ಪುಸ್ತಕಪ್ರೀತಿ ಮತ್ತು ಸಾಹಿತ್ಯದ ರುಚಿ ಬೆಳೆಸುವದಾಗಿದೆ, ಇಂತಹ ಕಾರ್ಯಕ್ರಮ ಸಾಹಿತ್ಯ ಅಕಾಡೆಮಿ ಆಯೋಜಿಸಿದ್ದು ಅಭಿನಂದನಾರ್ಹವಾಗಿದೆ ಎಂದರು.

ವೇದಿಕೆಯಲ್ಲಿ ಐಕ್ಯೂಎಸಿ ಸಂಚಾಲಕ ಡಾ.ರಾಜಶೇಖರ ಬೆನಕನಳ್ಳಿ, ಕನ್ನಡ ವಿಭಾಗದ ಮುಖ್ಯಸ್ಥ ಡಾ. ಹಣಮಂತ ಹರವಾಳ , ಎನ್ ಎಸ್ಎಸ್ ಸಂಯೋಜನಾಧಿಕಾರಿ ಡಾ.ಯಮನಪ್ಪ ಕೆಳಗೇರಿ, ಪ್ರೊ.ರಾಜೇಸಾಬ ಮೊದಲಾದವರು ವೇದಿಕೆಯಲ್ಲಿದ್ದರು.

ಕು. ಶಶಿಕಲಾ ಪ್ರಾರ್ಥಿಸಿದರು. ಪ್ರೊ.ರಾಜೇಸಾಬ ಸ್ವಾಗತಿಸಿದರು. ಡಾ. ಕೆಳಗೇರಿ ವಂದಿಸಿದರು. ಡಾ. ರಮೇಶ ಕತ್ತಿ ನಿರೂಪಿಸಿದರು.

## ಎಚ್.ಡಿ.ಕೋಟೆ ತಾಲೂಕಿನ ಕಾಡಂಚಿನ ಭಾಗದಲ್ಲಿ ಸಚಿವ ಸಂಪುಟ ಸಭೆಗೆ ಮನವಿ

# ರೈತರ ಮೇಲಿನ ಕೇಸ್ ವಾಪಸ್ ಪಡೆಯಲು ಚಂದನ್ ಗೌಡ ಒತ್ತಾಯ

■ ಉದಯರಶ್ಮಿ ದಿನಪತ್ರಿಕೆ



ಸರಗೂರು: ಅವಳಿ ತಾಲೂಕಿನ ಜನ ಎದುರಿಸುತ್ತಿರುವ ಸಮಸ್ಯೆಗಳ ವಾಸ್ತವಾಂಶ ಗೊತ್ತಾಗಬೇಕಾದರೆ, ರಾಜ್ಯ ಸರ್ಕಾರ, ಕಾಡಂಚಿನ ಭಾಗದಲ್ಲಿ ಸಚಿವ ಸಂಪುಟ ಸಭೆ ನಡೆಸಿ ಚರ್ಚಿಸಬೇಕು ಎಂದು ಕರ್ನಾಟಕ ರಾಜ್ಯ ರೈತ ಕಲ್ಯಾಣ ಸಂಘದ ರಾಜ್ಯಾಧ್ಯಕ್ಷ ಭೂಮಿಪುತ್ರ ಚಂದನ್ ಗೌಡ ಸಿ ಅವರು ಮನವಿ ಮಾಡಿದರು.

ಅರಣ್ಯ ಇಲಾಖೆ ಮತ್ತು ಹಾರ್ಟ್ ಸಂಸ್ಥೆ ಸಹಯೋಗದಲ್ಲಿ ತಾಲೂಕಿನ ಹಳೆಹೆಗ್ಗೂಡಿಲು ಗ್ರಾಮದಲ್ಲಿ ಹಮ್ಮಿಕೊಂಡಿದ್ದ ಉಚಿತ ಜನ-ಜಾನುವಾರುಗಳ ಆರೋಗ್ಯ ತಪಾಸಣಾ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಮಾತನಾಡಿದರು. ಹುಲಿ ದಾಳಿ ಬಳಿಕ ಹಳೆಹೆಗ್ಗೂಡಿಲು ಗ್ರಾಮದ ಜನರು ಭಯಭೀತರಾಗಿದ್ದಾರೆ. ಆವೇಶದಲ್ಲಿ ಸಣ್ಣ ತಪ್ಪು ಮಾಡಿದ್ದಾರೆ. ಹೀಗಾಗಿ ಅರಣ್ಯ ಇಲಾಖೆ ರೈತರನ್ನು ಕ್ಷಮಿಸಿ, ಅವರ ಮೇಲೆ ದಾಖಲಿಸಿರುವ ಪ್ರಕರಣವನ್ನು ಸರ್ಕಾರ ಹಿಂಪಡೆಯುವಂತೆ ಮಾಡಲು ಕ್ರಮ ಕೈಗೊಳ್ಳಬೇಕು. ಸ್ಥಳೀಯ ಶಾಸಕರು, ಸಚಿವರು, ಸರ್ಕಾರದ ಮೇಲೆ ಒತ್ತಡ ಏರಿ, ಸಚಿವ ಸಂಪುಟ ಸಭೆಯಲ್ಲಿ ಕೇಸ್ ಹಿಂಪಡೆಯುವಂತೆ ಮಾಡಬೇಕು ಎಂದು ಚಂದನ್ ಗೌಡ ಮನವಿ ಮಾಡಿದರು.

ಮುಳುಗಡೆ ಪ್ರದೇಶದ ಇಲ್ಲಿನ ಜನ ಕಳೆದ 40-50 ವರ್ಷಗಳಿಂದಲೂ ಅರಣ್ಯ ಮತ್ತು ಕಂದಾಯ ಇಲಾಖೆಯ ನಿರ್ಲಕ್ಷ್ಯದಿಂದ ಸಾಗುವಳಿ ಪತ್ರ ಪಡೆಯಲು ಸಾಧ್ಯವಾಗಿಲ್ಲ. ಈಗಲಾದರೂ ಈ ಎರಡು ಇಲಾಖೆಗಳು, ಜಂಟಿ ಸರ್ವೇ ಕಾರ್ಯ ಕೈಬಿಟ್ಟು, ರೈತರಿಗೆ ಸಾಗುವಳಿ ಪತ್ರ ಕೊಡಲು ಮುಂದಾಗಬೇಕು ಎಂದು ಮನವಿ ಮಾಡಿದರು.

ಅರಣ್ಯ ಸಂರಕ್ಷಣಾಧಿಕಾರಿ ಸುಮಿತ್ರ ಮಾತನಾಡಿ, ಹುಲಿ ಅಥವಾ ಆನೆಗಳ ದಾಳಿಯನ್ನು ಒಂದು ಪ್ರಾಕೃತಿಕ ವಿಕೋಪ ಎಂದು ಭಾವಿಸಬೇಕೋ ಹೊರತು, ಕೋಪದಲ್ಲಿ, ಆವೇಶದಲ್ಲಿ ಯಾರು ಕೂಡ ಕಾನೂನು ಕೈಗೆತ್ತಿಕೊಂಡು ಅಶಾಂತಿ ಉಂಟುಮಾಡಬಾರದು. ಈ ಹಿಂದೆಯೂ ಕೂಡ ಅರಣ್ಯದಲ್ಲಿ ಆದಿವಾಸಿಗಳು ವಾಸ ಮಾಡುತ್ತಿದ್ದರು. ವನ್ಯಪ್ರಾಣಿಗಳ ಜೊತೆ ಅವಿನಾಭಾವ ಸಂಬಂಧ ಹೊಂದಿದ್ದ ಅವರು, ವನ್ಯಜೀವಿಗಳಿಂದ ತಮ್ಮನ್ನು ಹೇಗೆ ರಕ್ಷಿಸಿಕೊಳ್ಳಬೇಕು, ಅವುಗಳ ಜೊತೆ ಹೇಗೆ ವರ್ತಿಸಬೇಕು ಎಂಬುದನ್ನು ಚೆನ್ನಾಗಿ ತಿಳಿದುಕೊಂಡಿದ್ದರು. ವಾಸನೆ ಸೇರಿದಂತೆ ಶಬ್ದದಿಂದಲೇ ಕಾಡುಪ್ರಾಣಿಗಳ ಸುಳಿವು ತಿಳಿದುಕೊಂಡು ಮುಂಜಾಗ್ರತಾ ಕ್ರಮಕೈಗೊಳ್ಳುತ್ತಿದ್ದರು. ಅದೇ ರೀತಿ ಕಾಡಂಚಿನ ಭಾಗದಲ್ಲಿ ವಾಸಿಸುವ ಜನ ಮುನ್ನಚ್ಚರಿಕೆ ವಹಿಸಬೇಕು. ಅರಣ್ಯ ರಕ್ಷಣೆ, ವನ್ಯಜೀವಿಗಳ ಸಂರಕ್ಷಣೆ ಕೇವಲ ಅರಣ್ಯ ಇಲಾಖೆಯ ಜವಾಬ್ದಾರಿಯಲ್ಲ. ಪ್ರತಿಯೊಬ್ಬರ ಹೊಣೆಗಾರಿಕೆ ಕೂಡ ಹೌದು. ಅರಣ್ಯ ಇದ್ದರೆ ನಾವು, ನೀವು. ಇಲ್ಲದಿದ್ದರೆ ಅಸಮತೋಲನ ಉಂಟಾಗಿ ಅನಾಹುತ ಸಂಭವಿಸುತ್ತೆ ಎಂದು ಹೇಳಿದರು.

ಕಾರ್ಯಕ್ರಮದಲ್ಲಿ ಸರಗೂರು ವಲಯ ಅರಣ್ಯಾಧಿಕಾರಿ ಡಾ.ಲೋಕೇಶ್, ಹಾರ್ಟ್ ಸಂಸ್ಥೆ ಸಂಸ್ಥಾಪಕ ಶಿವಕುಮಾರ್, ಸಂಯೋಜಕ ಶಿವಲಿಂಗ, ಉಪವಲಯ ಅರಣ್ಯಾಧಿಕಾರಿಗಳಾದ ಪ್ರದೀಪ್ ಕುಮಾರ್, ಅರ್ಪಿತಾ, ಯಜಮಾನರಾದ ಚುಂಚನಾಯಕ, ಗೋವಿಂದರಾಜು, ಭಲ್ಲೇಗೌಡ, ಗ್ರಾ.ಪಂ. ಮಾಜಿ ಸದಸ್ಯರಾದ ಮಹದೇವನಾಯಕ, ಸೋಮಣ್ಣ, ಗಡಿ ಯಜಮಾನರಾದ ಚೆನ್ನನಾಯಕ, ರೈತ ಕಲ್ಯಾಣ ಸಂಘದ ಸರಗೂರು ತಾಲೂಕು ಕಾರ್ಯದರ್ಶಿ ಬೈರ್ಯನಾಯಕ, ಯುವ ರೈತ ಮುಖಂಡ ನವೀನ್ ಕುಮಾರ್, ಗ್ರಾಮಸ್ಥರಾದ ಹೆಚ್ ಎನ್ ಚೆನ್ನನಾಯಕ, ಹೆಚ್ ಎಂ ಶಿವಪ್ಪ, ಸೋಮಣ್ಣ, ಶಂಕರ, ಸಿದ್ದಪ್ಪಾಜಿ, ಭೋಗಯ್ಯ, ಹನುಮಯ್ಯ ಸೇರಿದಂತೆ ರೈತ ಕಲ್ಯಾಣ ಸಂಘದ ತಾಲೂಕು ಅಧ್ಯಕ್ಷರು, ಜಿಲ್ಲಾ ಅಧ್ಯಕ್ಷರು, ಕಾರ್ಯದರ್ಶಿಗಳು, ಪದಾಧಿಕಾರಿಗಳು ಉಪಸ್ಥಿತರಿದ್ದರು.

"ಕಾಡಂಚಿನ ಭಾಗದಲ್ಲಿ ಕಾಡುಪ್ರಾಣಿಗಳ ನಿಯಂತ್ರಣಕ್ಕೆ ತೆಗೆದುಕೊಂಡ ಕೆಲ ಮುಂಜಾಗ್ರತಾ ಕ್ರಮಗಳಿಂದ ಕಳೆದ ಮೂರು ತಿಂಗಳಿಂದ ಯಾವುದೇ ಪ್ರಾಣ ಹಾನಿ ಸಂಭವಿಸಿಲ್ಲ. ಸರಗೂರು ವಲಯದ ತಲೆಬುರುಡೆಯಿಂದ 700 ಮೀಟರ್ ವರೆಗೆ ರೈಲ್ವೆ ಕಂಬಿ ಅಳವಡಿಕೆಗೆ ಅನುಮತಿ ಸಿಕ್ಕಿದೆ. ಇದರಿಂದ ನುಗು ಹಿನ್ನೀರಿನಿಂದ ಆನೆಗಳು ಬರುವುದು ಕಡಿಮೆಯಾಗಲಿದೆ."

■ ನಾರಾಯಣಸ್ವಾಮಿ
ಮೊಳೆಯೂರು ವಲಯ ಅರಣ್ಯಾಧಿಕಾರಿ

### ರೈತರ ಮೇಲೆ ದಬ್ಬಾಳಿಕೆ

ಅರಣ್ಯ ಇಲಾಖೆಯಲ್ಲಿರುವ ರಾಮಾಂಜುನೆಯ ಎಂಬಾತ ನಮ್ಮ ಗ್ರಾಮದಲ್ಲಿ ನಡೆದಿರುವ ಘಟನೆ ಬಗ್ಗೆ ಮೂಗು ತೂರಿಸಿ ದಬ್ಬಾಳಿಕೆ ಮಾಡುತ್ತಿದ್ದಾನೆ. ಆತನಿಂದಲೇ ನಮ್ಮ ಗ್ರಾಮದ 40 ರೈತರ ಮೇಲೆ ಕೇಸ್ ದಾಖಲಾಗಿದೆ. ರೆಸಾರ್ಟ್ ವೊಂದರ ಜೊತೆ ಲಿಂಕ್ ಹೊಂದಿರುವ ಆತನ ವಿರುದ್ಧ ಸೂಕ್ತ ಕ್ರಮಕೈಗೊಳ್ಳಬೇಕೆಂದು ಹಳೆಹೆಗ್ಗೂಡಿಲು ಗ್ರಾಮಸ್ಥರು ಎಸಿಎಫ್ ಸುಮಿತ್ರ ಅವರಿಗೆ ಮನವಿ ಮಾಡಿದರು.

## ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವಾತ್ಸಲ್ಯ ಮನೆ ಹಸ್ತಾಂತರ

■ ಉದಯರಶ್ಮಿ ದಿನಪತ್ರಿಕೆ



ಕಲಕೇರಿ: ಸಮೀಪದ ಅಸ್ಕಿ ಕಾರ್ಯಕ್ಷೇತ್ರದಲ್ಲಿ ಶ್ರೀಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ವತಿಯಿಂದ ವಾತ್ಸಲ್ಯ ಯೋಜನೆಯಡಿ ಮಂಜೂರಾಗಿದ್ದ ಮನೆಯನ್ನು ನಿರ್ಮಿಸಿ ಫಲಾನುಭವಿಯಾದ ಅಸ್ಕಿ ಗ್ರಾಮದ ಪ್ಯಾಟಿ ಈರಮ್ಮನವರಿಗೆ "ವಾತ್ಸಲ್ಯ ಮನೆ" ಹಸ್ತಾಂತರ ಕಾರ್ಯಕ್ರಮ ನಡೆಯಿತು.

ದೀಪ ಬೆಳಗಿಸುವುದರ ಮೂಲಕ ಕಾರ್ಯಕ್ರಮದ ಉದ್ಘಾಟನೆ ಮಾಡಿದ ಜಿಲ್ಲಾ ನಿರ್ದೇಶಕರಾದ ಮೋಹನ್ ನಾಯ್ಕ್ ಅವರು ಮಾತನಾಡಿ ಡಾ. ವೀರೇಂದ್ರ ಹೆಗ್ಗಡೆ ಮತ್ತು ಮಾತೃಶ್ರೀ ಹೇಮಾವತಿ ಅಮ್ಮನವರ ಆಶಾದಾಯಕ ಕಾರ್ಯಕ್ರಮವಾದ ವಾತ್ಸಲ್ಯ ಮನೆ ರಚನೆ, ಮಾಸಾಶಾನ ಪಲಾನುಭವಿಗಳಿಗೆ, ನಿರ್ಗತಿಕರಿಗೆ, ಸೂರಿಲ್ಲದವರಿಗೆ ಆಶ್ರಯ ಒದಗಿಸುವ ನಿಟ್ಟಿನಲ್ಲಿ ಪೂಜ್ಯರು ವಾತ್ಸಲ್ಯ ಮನೆ ರಚನೆ ಮಾಡುತ್ತಿದ್ದು, ಯೋಜನೆ ಅಡಿಯಲ್ಲಿ ಸುಮಾರು 18000 ವಾತ್ಸಲ್ಯ ಪಲಾನುಭವಿಗಳಿಗೆ ಪ್ರತಿ ತಿಂಗಳು ಒಂದು ಸಾವಿರ ಮಾಸಾಶಾನ ಬರುತಿದ್ದು, ಸುಮಾರು 800 ವಾತ್ಸಲ್ಯ ಮನೆ ರಚನೆ ಮಾಡಿದ್ದು ಪಲಾನುಭವಿಗಳು ನೆಮ್ಮದಿಯ ಜೀವನ ನಡೆಸಲು ಪೂಜ್ಯರು ದಾರಿಮಾಡಿ ಕೊಟ್ಟಿದ್ದಾರೆ. ಇಷ್ಟೇ ಅಲ್ಲದೇ ಪೂಜ್ಯರು ಕೆರೆ ಹೂಳೆತ್ತುವುದು, ಸುಜ್ಞಾನ ಶಿಷ್ಯ ವೇತನ, ಜ್ಞಾನ ದೀಪ ಶಿಕ್ಷಕರ ನೇಮಕಾತಿ ಸೇರಿದಂತೆ ಹಲವಾರು ಕಾರ್ಯಕ್ರಮಗಳ ಮೂಲಕ ಸಮಾಜಕ್ಕೆ ದಾರಿದೀಪವಾಗಿದ್ದಾರೆ ಎಂದರು.

ಈ ವೇಳೆ ಕೆರೆ ಸಮಿತಿಯ ಅಧ್ಯಕ್ಷರಾದ ಜಲಪುರ ಸಿದ್ದನಗೌಡ ಬಸನಗೌಡ ಬಿರಾದಾರ ಮತ್ತು ಬಿಜೆಪಿ ಜಿಲ್ಲಾ ಉಪಾಧ್ಯಕ್ಷ ಪ್ರಭುಗೌಡ ಅವಣ್ಣ ಬಿರಾದರ ಮಾತನಾಡಿ, ಸರ್ಕಾರ ಮಾಡದಂತಹ ಹಲವು ಯೋಜನೆಗಳನ್ನು ಪೂಜ್ಯರು ಜಾರಿಗೊಳಿಸುತ್ತಿದ್ದು, ಮಕ್ಕಳಿಲ್ಲದರಿಗೆ ನಿರ್ಗತಿಕರಿಗೆ ವಾತ್ಸಲ್ಯ ಅಂದರೆ ತಾಯಿಯ ಮಮತೆ, ಕರುಣೆಯ ಪ್ರತಿರೂಪವೇ "ವಾತ್ಸಲ್ಯಮನೆ" ಯಾಗಿದೆ. ಫಲಾನುಭವಿಗಳು ಯೋಜನೆ ಯನ್ನು ಸದುಪಯೋಗಪಡಿಸಿಕೊಳ್ಳುವ ಮೂಲಕ ಸುಂದರ ಸ್ವಾವಲಂಬಿ ಜೀವನ ನಡೆಸಲು ಸಾಧ್ಯವಾಗುತ್ತದೆ ಮತ್ತು ಇಂತಹ ಕಾರ್ಯಕ್ರಮದಲ್ಲಿ ಪಾಲ್ಗೊಂಡಿರುವುದು ನಮ್ಮೆಲ್ಲರ ಪುಣ್ಯವಾಗಿದ್ದು, ಮಂಜುನಾಥ ಸ್ವಾಮಿ ಪೂಜ್ಯರಿಗೆ ಮತ್ತು ಅಮ್ಮನವರಿಗೆ ಆಯುಷ್ಯ ಆರೋಗ್ಯ ಕೊಟ್ಟು ಕಾಪಾಡಲಿ ಎಂದು ಹಾರೈಸಿದರು.

ಕಾರ್ಯಕ್ರಮದಲ್ಲಿ ತಾಲ್ಲೂಕು ಯೋಜನಾಧಿಕಾರಿ ಬಿನೋಯಿ ಅವರು ಮಾತನಾಡಿದರು. ಸಂಗನಗೌಡ ವನಕಿಹಾಳ ಎಸ್‌ಡಿಎಮ್‌ಸಿ ಅಧ್ಯಕ್ಷರು, ಸಿ.ಎಮ್.ಟಕ್ಕಳಕಿ ಪಿಕೆಪಿಎಸ್ ಮಾಜಿ ಅಧ್ಯಕ್ಷರು, ವಿಶ್ವನಾಥ ಕಾಶಿನಾಥ ತಳವಾರ ಬಿಜಾಪುರ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರು, ಅಯ್ಯಪ್ಪ ಮುಗುಳಿ ಗ್ರಾಪಂ ಸದಸ್ಯರು, ರೇವಣಸಿದ್ಧ ಕವಡಿಮಠ ಗ್ರಾಪಂ ಸದಸ್ಯರು, ಗಣ್ಯರಾದ ಶಾಂತಯ್ಯ ಚನ್ನಬಸಯ್ಯ ಹಿರೇಮಠ, ಎಂ.ಕೆ. ಇಂಚಗೇರಿ, ರೇವಣಸಿದ್ದಪ್ಪ ಹಂಚಲಿ, ಬಾಲಪ್ಪಗೌಡ ಬಿರಾದಾರ, ಬಸವರಾಜ ಪಡಶೆಟ್ಟಿ, ಜ್ಞಾನ ವಿಕಾಸ ಸಮನ್ವಯಾಧಿಕಾರಿ ಆಶಾ ಮೇಡಂ, ರಿಕವರಿ ಮೇಲ್ವಿಚಾರಕರಾದ ಹನುಮಂತ, ತಾಲೂಕು ಲೆಕ್ಕ ಪರಿಶೋಧಕರಾದ ಘನರಾಜ್, ವಲಯ ಮೇಲ್ವಿಚಾರಕರಾದ ಸಿದ್ದಲಿಂಗಪ್ಪ, ಸೇವಾ ಪ್ರತಿನಿಧಿ ನೀಲಮ್ಮ, ವ್ಹಿಎಲ್‌ಇ ಸೇವಾದಾರರಾದ ನಿರ್ಮಲ, ಶ್ರೀದೇವಿ ಸುವಿಧಾ ಸಹಾಯಕರು ಸೇರಿದಂತೆ ಇತರರು ಇದ್ದರು.

## ಕುಡಿಯಲು ನೀರಿಲ್ಲದೆ ಹತ್ತಳ್ಳಿ ಗ್ರಾಮದಲ್ಲಿ ನೂರಾರು ಪಕ್ಷಿಗಳ ಸಾವು । ನೀರಾವರಿ ಇಲಾಖೆ ಅಧಿಕಾರಿಗಳ ನಿರ್ಲಕ್ಷ್ಯಕ್ಕೆ ಆಕ್ರೋಶ

# ಹತ್ತಳ್ಳಿ ಬೋರಿ ಹಳ್ಳದಲ್ಲಿ ಪಕ್ಷಿಗಳ ಮಾರಣಹೋಮ :ಜನರಲ್ಲಿ ಆತಂಕ

■ ಉದಯರಶ್ಮಿ ದಿನಪತ್ರಿಕೆ



ಚಡಚಣ: ತಾಲೂಕಿನ ಹತ್ತಳ್ಳಿ ಗ್ರಾಮದ ಬೋರಿ ಹಳ್ಳದಲ್ಲಿ ನೂರಾರು ಪಕ್ಷಿಗಳು ಹಾಗೂ ಕೆಲವು ಕಾಡು ಪ್ರಾಣಿಗಳು ಸತ್ತಿರುವ ಘಟನೆಗೆ ಹಳ್ಳದ ಬದಿಯಲ್ಲಿರುವ ಗ್ರಾಮ ಪಂಚಾಯತಿ ಹಾಗೂ ಚಡಚಣ ಪಟ್ಟಣ ಪಂಚಾಯತಿಯವರ ನಿರ್ಲಕ್ಷ್ಯವೇ ಕಾರಣ ಎಂಬ ಆರೋಪ ಗ್ರಾಮಸ್ಥರಿಂದ ಕೇಳಿಬಂದಿದೆ. ಊರಿನ ಘಟಾರ (ಕಲುಷಿತ) ನೀರನ್ನು ನೇರವಾಗಿ ಬೋರಿ ಹಳ್ಳಕ್ಕೆ ಹರಿಬಿಟ್ಟಿರುವುದರಿಂದ ಪರಿಸರ ಮಾಲಿನ್ಯ ಉಂಟಾಗಿ ಮತ್ತು ಬೇಸಿಗೆಯ ಕಾಲದಲ್ಲಿ ಹಳ್ಳ ಸಂಪೂರ್ಣ ಬತ್ತಿರುವದರಿಂದ ಪಕ್ಷಿಗಳ ಸಾವಿಗೆ ಕಾರಣವಾಗಿದೆ ಎಂದು ಜನರು ಆಕ್ರೋಶ ವ್ಯಕ್ತಪಡಿಸಿದ್ದಾರೆ. ಹಳ್ಳದ ಸುತ್ತಮುತ್ತ ನವಿಲುಗಳು, ಬಾತುಕೋಳಿಗಳು ಸೇರಿದಂತೆ ವಿವಿಧ ಪಕ್ಷಿಗಳು ಹಾಗೂ ನರಿ ಮುಂತಾದ ಕಾಡು ಪ್ರಾಣಿಗಳು ಸತ್ತ ಸ್ಥಿತಿಯಲ್ಲಿ ಪತ್ತೆಯಾಗುತ್ತಿವೆ. ಹಳ್ಳದಲ್ಲಿ ನಿಂತ ನೀರು ದುರ್ವಾಸನೆಯಿಂದ ಕಲುಷಿತಗೊಂಡಿದ್ದು, ಇದನ್ನು ಕುಡಿದ ಪಕ್ಷಿಗಳು ಮತ್ತು ಪ್ರಾಣಿಗಳು ಸಾವನ್ನಪ್ಪುತ್ತಿರುವ ಸಾಧ್ಯತೆ ಇದೆ ಎಂದು ಗ್ರಾಮಸ್ಥರು ತಿಳಿಸಿದ್ದಾರೆ. ರಾಷ್ಟ್ರಪಕ್ಷಿ ನವಿಲುಗಳ ಸಾವು ಜನರಲ್ಲಿ ಹೆಚ್ಚಿನ ಆತಂಕಕ್ಕೆ ಕಾರಣವಾಗಿದೆ.

ಗ್ರಾಮಸ್ಥರ ಪ್ರಕಾರ, ಚಡಚಣ ಪಟ್ಟಣದ ಒಳಚರಂಡಿ ನೀರನ್ನು ಯಾವುದೇ ಶುದ್ಧೀಕರಣವಿಲ್ಲದೆ ನೇರವಾಗಿ ಹಳ್ಳಕ್ಕೆ ಬಿಡಲಾಗುತ್ತಿದೆ. ಇದರಿಂದ ಹಳ್ಳದ ನೀರು ಸಂಪೂರ್ಣವಾಗಿ ಕಲುಷಿತಗೊಂಡು ವಿಷಮಯವಾಗಿದೆ. ಬೇಸಿಗೆ ಕಾಲದಲ್ಲಿ ನೀರಿನ ಕೊರತೆ ಇರುವುದರಿಂದ ಪಕ್ಷಿಗಳು ಹಳ್ಳದಲ್ಲಿನಿಂತ ಇದೇ ನೀರನ್ನು ಕುಡಿಯಬೇಕಾದ ಅನಿವಾರ್ಯತೆ ಎದುರಿಸುತ್ತಿದ್ದು, ಅದರ ಪರಿಣಾಮವಾಗಿ ಸಾವುಗಳು ಹೆಚ್ಚಾಗುತ್ತಿವೆ ಎಂದು ಹೇಳಿದ್ದಾರೆ. ಈ ಘಟನೆಗೆ ಸಂಬಂಧಿಸಿದಂತೆ ನೀರಾವರಿ ಇಲಾಖೆ ಹಾಗೂ ಸ್ಥಳೀಯ ಸಂಸ್ಥೆಗಳ ಅಧಿಕಾರಿಗಳ ವಿರುದ್ಧ ಗಂಭೀರ ನಿರ್ಲಕ್ಷ್ಯ ಆರೋಪಗಳು ಕೇಳಿಬಂದಿವೆ. ಹಳ್ಳದ ನಿರ್ವಹಣೆ, ಶುದ್ಧೀಕರಣ ಹಾಗೂ ನೀರಿನ ಸಂರಕ್ಷಣೆ ಕುರಿತು ಯಾವುದೇ ಕ್ರಮ ಕೈಗೊಳ್ಳದಿರುವುದು ಈ ದುರಂತಕ್ಕೆ ಕಾರಣವಾಗಿದೆ ಎಂದು ಸಾರ್ವಜನಿಕರು ಆರೋಪಿಸಿದ್ದಾರೆ.

ಇನ್ನು ಕೆಲವರು ರೈತರು ಬಳಸುವ ಕೀಟನಾಶಕ ಔಷಧಗಳು ಅಥವಾ ಸಮೀಪದ ಕೈಗಾರಿಕಾ ಘಟಕಗಳ ಮಾಲಿನ್ಯವೂ ಕಾರಣವಾಗಿರಬಹುದು ಎಂದು ಶಂಕೆ ವ್ಯಕ್ತಪಡಿಸಿದ್ದಾರೆ. ಆದಾಗ್ಯೂ, ನಿಖರ ಕಾರಣವನ್ನು ವೈಜ್ಞಾನಿಕ ತನಿಖೆಯ ನಂತರವೇ ತಿಳಿದುಬರಬೇಕಾಗಿದೆ. ತಕ್ಷಣ ಅರಣ್ಯ ಇಲಾಖೆ, ಪರಿಸರ ಇಲಾಖೆ ಹಾಗೂ ಪಶುವೈದ್ಯಕೀಯ ಇಲಾಖೆ ಅಧಿಕಾರಿಗಳು ಸ್ಥಳಕ್ಕೆ ಭೇಟಿ ನೀಡಿ ಪರಿಶೀಲನೆ ನಡೆಸಿ, ನೀರಿನ ಮಾದರಿ ಹಾಗೂ ಸತ್ತ ಪಕ್ಷಿಗಳ ಮಾದರಿಗಳನ್ನು ಪರೀಕ್ಷಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ. ಜೊತೆಗೆ ಹಳ್ಳಕ್ಕೆ ಹೊಂದಿಕೊಂಡಿರುವ ಗ್ರಾಮಗಳು ಮತ್ತು ಚಡಚಣ ಪಂಚಾಯತಿಯವರು ಘಟಾರ ನೀರನ್ನು ಹಳ್ಳಕ್ಕೆ ಬಿಡುವುದನ್ನು ತಕ್ಷಣ ನಿಲ್ಲಿಸಿ, ಶುದ್ಧೀಕರಣ ಘಟಕ ಸ್ಥಾಪನೆ ಮಾಡಿ ಪರಿಸರ ಸಂರಕ್ಷಣೆ ಕೈಗೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

ಈ ದುರ್ಘಟನೆ ಗ್ರಾಮ ಪಂಚಾಯತಿ ಮತ್ತು ಚಡಚಣ ಪಟ್ಟಣ ಪಂಚಾಯತಿಯ ನಿರ್ಲಕ್ಷ್ಯವನ್ನು ಬಯಲಿಗೆಳೆದಿದ್ದು, ಸಂಬಂಧಪಟ್ಟ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಂಡು ಮುಂದಿನ ದಿನಗಳಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ತಡೆಗಟ್ಟಬೇಕೆಂಬುದು ಸಾರ್ವಜನಿಕರ ಆಗ್ರಹವಾಗಿದೆ.

## ಅಪ್ಪು ಸರ್ಕಲ್ ನಿರ್ಮಾಣಕ್ಕೆ ಭೂಗಳ್ಳರ ಅಡ್ಡಿ: ಜೀವ ಬೆದರಿಕೆ ಹಾಕಿದವರ ಬಂಧನಕ್ಕೆ ಆಗ್ರಹ

■ ಉದಯರಶ್ಮಿ ದಿನಪತ್ರಿಕೆ



ಕಲಬುರ್ಗಿ: ನಗರದ ಸಂಗಮೇಶ್ವರ ಕಾಲೋನಿಯ ಎಸ್‌ಬಿಐ ಬ್ಯಾಂಕ್ ಎದುರುಗಡೆ ಜಾಗದಲ್ಲಿ ಅಪ್ಪು ಸರ್ಕಲ್ ನಿರ್ಮಾಣಕ್ಕೆ ಭೂಗಳ್ಳರು ಅಡ್ಡಿಯುಂಟು ಮಾಡಿದ್ದಲ್ಲದೇ ಜೀವ ಬೆದರಿಕೆ ಹಾಕಿದ್ದಾರೆ. ಆ ಕುರಿತು ಪೋಲಿಸರು ಪ್ರಕರಣ ದಾಖಲಿಸಿಕೊಂಡಿದ್ದರೂ ಸಹ ಆರೋಪಿಗಳನ್ನು ಈವರೆಗೂ ಬಂಧಿಸಿಲ್ಲ ಎಂದು ಡಾ. ರಾಜಕುಮಾರ್ ಅಭಿಮಾನಿಗಳ ಸಂಘದ ಜಿಲ್ಲಾಧ್ಯಕ್ಷ ರಾಘವೇಂದ್ರ ವಿ. ಕುಲಕರ್ಣಿ ಅವರು ಅಸಮಾಧಾನ ವ್ಯಕ್ತಪಡಿಸಿದರು.

ನಗರದ ಪತ್ರಿಕಾ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಮಹಾನಗರ ಪಾಲಿಕೆ ವ್ಯಾಪ್ತಿಯ ಸರ್ಕಾರಿ ಜಮೀನು (ಸರ್ವೆ ನಂ: 78/1) ನಕಲಿ ದಾಖಲೆಗಳ ಮೂಲಕ ಖಾಸಗಿ ವ್ಯಕ್ತಿಗಳ ಹೆಸರಿಗೆ ನೋಂದಣಿ ಮಾಡಲಾಗಿದೆ. ಭೂ ಹಗರಣದ ವಿರುದ್ಧ ಧ್ವನಿ ಎತ್ತಿದ ಹಿನ್ನೆಲೆಯಲ್ಲಿ ತಮಗೆ ಜೀವ ಬೆದರಿಕೆ ಹಾಕಲಾಗಿದೆ. ಈ ಕುರಿತು ಎಫ್‌ಐಆರ್ ದಾಖಲಿಸಿದ್ದರೂ ಆರೋಪಿಗಳನ್ನು ಬಂಧಿಸುವಲ್ಲಿ ಪೊಲೀಸರು ನಿರ್ಲಕ್ಷ್ಯ ವಹಿಸಿದ್ದಾರೆ ಎಂದು ದೂರಿದರು. ಬ್ರಹ್ಮಪುರ ನಿವಾಸಿಯಾದ ನಾನು ಕಳೆದ 2023ರಲ್ಲಿ ಸಂಗಮೇಶ್ವರ ಕಾಲೋನಿಯ ಎಸ್‌ಬಿಐ ಬ್ಯಾಂಕ್ ಎದುರಿನ ಜಾಗದಲ್ಲಿ ನಟ ಪುನೀತ್ ರಾಜಕುಮಾರ ಅವರ ಸ್ಮರಣಾರ್ಥ "ಅಪ್ಪು ಸರ್ಕಲ್" ನಿರ್ಮಿಸಲು ಮುಂದಾದಾಗ ಪಾಲಿಕೆ ಅಧಿಕಾರಿಗಳು ಮತ್ತು ಪೊಲೀಸರು ತಡೆ ಒಡ್ಡಿದ್ದರು. ಆದರೆ ಅದೇ ಜಾಗದಲ್ಲಿ ಭೂಮಿಗಳ್ಳರು ಪಾಲಿಕೆ ಅಧಿಕಾರಿಗಳ ಸಹಕಾರದಿಂದ ನಕಲಿ ದಾಖಲೆ ಸೃಷ್ಟಿಸಿ ಎಂಟು ಪ್ಲಾಟ್‌ಗಳನ್ನು ಮಾಡಿಕೊಂಡಿರುವುದು ತನಿಖೆಯಿಂದ ತಿಳಿದುಬಂದಿದೆ ಎಂದು ಅವರು ಹೇಳಿದರು.

ಅಕ್ರಮದ ವಿರುದ್ಧ ದಾಖಲೆಗಳನ್ನು ಸಂಗ್ರಹಿಸಿ ದೂರು ನೀಡಲು ಮುಂದಾದ ವೇಳೆ, ಕಳೆದ ವರ್ಷ ಸೆಪ್ಟೆಂಬರ್‌ನಲ್ಲಿ ಅಪರಿಚಿತರು ಕರೆಮಾಡಿ ಅವಾಚ್ಯ ಶಬ್ದಗಳಿಂದ ನಿಂದಿಸಿ ಜೀವ ಬೆದರಿಕೆ ಹಾಕಿದ್ದಾರೆ. ಅಲ್ಲದೆ, ಡಿಸೆಂಬರ್ 17.ರಂದು ಪೊಲೀಸ್ ಠಾಣೆ ಎದುರು 50ರಿಂದ 60 ಜನರ ಗುಂಪು ಕಟ್ಟಿಕೊಂಡು ಹಲ್ಲೆ ಮಾಡಲು ಪ್ರಯತ್ನಿಸಿದರು ಎಂದು ಅವರು ಆರೋಪಿಸಿದರು. ಫೆಬ್ರವರಿ 22ರಂದು ಪ್ರಕರಣ ದಾಖಲಿಸಿದ್ದರೂ ಇನ್ನೂ ಯಾರನ್ನೂ ಬಂಧಿಸಿಲ್ಲ.

## ಕೇಂದ್ರ ಸರ್ಕಾರದ ಪಿಂಚಣಿ ನೀತಿ ವಿರುದ್ಧ ನಿವೃತ್ತ ನೌಕರರಿಂದ ಪ್ರತಿಭಟನೆ

■ ಉದಯರಶ್ಮಿ ದಿನಪತ್ರಿಕೆ

ಕಲಬುರ್ಗಿ: ಕೇಂದ್ರ ಸರ್ಕಾರವು ಪಿಂಚಣಿದಾರರನ್ನು ವರ್ಗೀಕರಿಸುವ ಮತ್ತು ಪಿಂಚಣಿ ವ್ಯತ್ಯಾಸಗಳನ್ನು ಕಾಯ್ದುಕೊಳ್ಳುವ ವಿವಾದಾತ್ಮಕ ಕ್ರಮವನ್ನು ಜಾರಿಗೆ ತಂದಿರುವುದನ್ನು ವಿರೋಧಿಸಿ ಕರ್ನಾಟಕ ರಾಜ್ಯ ಸರ್ಕಾರಿ ನಿವೃತ್ತ ನೌಕರರ ಸಂಘದ ಸದಸ್ಯರು ಸಂಘದ ಅಧ್ಯಕ್ಷ ಕಾಶಪ್ಪ ವಂಜರಖೇಡ ಅವರ ನೇತೃತ್ವದಲ್ಲಿ ಬುಧವಾರ ತಹಸಿಲ್ದಾರ್ ಕಚೇರಿ ಮುಂದೆ ಪ್ರತಿಭಟನಾ ಪ್ರದರ್ಶನ ಮಾಡಿದರು.

ಪ್ರತಿಭಟನೆಕಾರರು ಕೇಂದ್ರ ಸರ್ಕಾರವು ಯಾವುದೇ ಮುನ್ಸೂಚನೆ ನೀಡದೆ, ಹಣಕಾಸು ಮಸೂದೆಯ ಭಾಗವಾಗಿ ಈ ಹೊಸ ಪಿಂಚಣಿನಿಯಮವನ್ನು 25ರಂದು ಲೋಕಸಭೆಯಲ್ಲಿ ಅಂಗೀಕರಿಸಿತ್ತು. ಇಂದು ಈ ಕಾಯ್ದೆಯು ಅಧಿಕೃತವಾಗಿ ಜಾರಿಗೆ ಬಂದಿದ್ದು, ಇದು ನಿವೃತ್ತ ನೌಕರರ ಹಿತಾಸಕ್ತಿಗೆ ಮಾರಕವಾಗಿದೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಪ್ರತಿಭಟನೆಕಾರರು ನಂತರ ತಹಸಿಲ್ದಾರ್ ಅವರ ಮೂಲಕ ಪ್ರಧಾನಿಗೆ ಮನವಿ ಪತ್ರ ಸಲ್ಲಿಸಿ, ಈ ಕಾಯ್ದೆಯ ಜಾರಿಯಿಂದಾಗಿ ನಿವೃತ್ತಿಯ ದಿನಾಂಕದ ಆಧಾರದ ಮೇಲೆ ಪಿಂಚಣಿದಾರರನ್ನು ವರ್ಗೀಕರಿಸಲಾಗುತ್ತದೆ. ಇದರಿಂದಾಗಿ ಕೇಂದ್ರವೇತನ ಆಯೋಗದ ಶಿಫಾರಸ್ಸುಗಳ ಪ್ರಯೋಜನಗಳು ಹಳೆಯ ಪಿಂಚಣಿದಾರರಿಗೆ ಸಿಗದೆ ಹೋಗುವ ಆತಂಕವಿದೆ. ಇದು ಸಂವಿಧಾನಾತ್ಮಕವಾಗಿ ದೊರೆತಿರುವ ನ್ಯಾಯಯುತ ಹಕ್ಕುಗಳ ಉಲ್ಲಂಘನೆಯಾಗಿದೆ ಎಂದು ದೂರಿದರು.

## ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳಿಗಾಗಿ ಜಾತಕ ಪಕ್ಷಿಗಳಂತೆ ಕಾಯುತ್ತಿರುವ ಹೋಟೆಲ್ ಮಾಲೀಕರು

# ಮುಂದುವರೆದ ಅಡುಗೆ ಅನಿಲ ಸಿಲಿಂಡರ್‌ಗಳ ಅಭಾವ

■ ಉದಯರಶ್ಮಿ ದಿನಪತ್ರಿಕೆ

■ ವರದಿ: ಸಿದ್ರಾಮ್ ಎಮ್ ಇಟ್ಟಿ

ಜಮಖಂಡಿ: ವಾಣಿಜ್ಯ ಬಳಕೆಯ ಅನಿಲ ಸಿಲಿಂಡರ್‌ಗಳಿಗಾಗಿ ಹೋಟೆಲ್ ಮಾಲೀಕರು ಜಾತಕ ಪಕ್ಷಿಗಳಂತೆ ಕಾಯುತ್ತಿದ್ದರೂ ಗ್ಯಾಸ್ ಏಜೆನ್ಸಿಗಳು ಮಾತ್ರ ಇನ್ನೂ ಗ್ಯಾಸ್ ಬಂದಿಲ್ಲ. ಏ.1ರಿಂದ ಸಮಸ್ಯೆ ಬಗೆಹರಿಯಲಿದೆ ಎಂದೇ ಹೇಳುತ್ತಿದ್ದಾರೆ. ಹೋಟೆಲ್‌ಗಳು ಹಾಗೂ ಇನ್ನಿತರ ಸೇವಾ ಸಂಸ್ಥೆಗಳಿಗೆ ದಿನನಿತ್ಯ ಅಗತ್ಯವಿರುವ ಸಿಲಿಂಡರ್‌ಗಳ ಶೇ.50ರಷ್ಟನ್ನು ನೀಡಲಾಗುತ್ತದೆ ಎಂದು ಸರ್ಕಾರ ಘೋಷಣೆ ಮಾಡಿದೆ. ಆದರೆ ಈ ವ್ಯವಸ್ಥೆ ಏ.1ರಿಂದ ಜಾರಿಗೆ ಬರಲಿದೆ ಎಂದು ಗ್ಯಾಸ್ ಏಜೆನ್ಸಿಗಳು ಹೇಳುತ್ತಿವೆ. ಹೀಗಾಗಿ ಬುಧವಾರ ಗುರುವಾರ ಕೂಡ ಅಡುಗೆ ಅನಿಲ ಸಿಲಿಂಡರ್‌ಗಳ ಅಭಾವ ಮುಂದುವರಿದಿದೆ. ಈ ನಡುವೆ ಕೆಲ ಹೋಟೆಲ್‌ಗಳು ಬಂದ್ ಮಾಡಿದ್ದರೆ, ಮತ್ತೆ ಕೆಲ ಸಣ್ಣ ಹೋಟೆಲ್‌ಗಳವರು ಸೌದೆ ಒಲೆ ಮೊರೆ ಹೋಗಿ ಅಡುಗೆ ಮಾಡುತ್ತಿದ್ದಾರೆ.

### ಪೆಟ್ರೋಲ್ - ಡಿಸೇಲ್ ಗಿಲ್ಲ ಸಮಸ್ಯೆ

ನಗರದಾದ್ಯಂತ ಹಾಗೂ ಗ್ರಾಮೀಣ ಪ್ರದೇಶಗಳಲ್ಲಿ ಪೆಟ್ರೋಲ್ ಮಾರಾಟ ಎಂದಿನಂತೆ ಇದೆ. ಯಾವುದೇ ಪೆಟ್ರೋಲ್ ಬಂಕ್‌ಗಳು ಬಂದ್ ಆಗಿಲ್ಲ. ಬಂಕ್‌ಗಳಿಗೆ ಬೇಕಾದ ಪೆಟ್ರೋಲ್ ಹಾಗೂ ಡೀಸೆಲ್ ಸಮರ್ಪಕವಾಗಿ ಸರಬರಾಜಾಗುತ್ತಿದೆ.

**ಜಿಎಸ್ ಟಿಯೇ ದಾಖಲೆ:**

ಕೇಂದ್ರ ಸರ್ಕಾರ ವಾಣಿಜ್ಯ ಸಿಲಿಂಡರ್ ನೀಡಲು ಕೆಲ ಮಾನದಂಡಗಳನ್ನು ನಿಗದಿಪಡಿಸಿದೆ. ಹೋಟೆಲ್ ಮಾಲೀಕರು ಜಿಎಸ್‌ಟಿ ದಾಖಲೆಗಳಲ್ಲಿ ಎಷ್ಟು ಸಿಲಿಂಡರ್ ಬಳಕೆಯನ್ನು ನಮೂದಿಸಿದ್ದಾರೋ, ಅದರಲ್ಲಿ ಶೇ.50 ರಷ್ಟು ಸಿಲಿಂಡರ್ ಮಾತ್ರ ದೊರಕಲಿದೆ. ಕೆಲ ಸಣ್ಣಪುಟ್ಟ ಹೋಟೆಲ್‌ಗಳು ಜಿಎಸ್‌ಟಿ ಹೊರೆ ತಪ್ಪಿಸಲು ಕಡಿಮೆ ಸಿಲಿಂಡರ್‌ಗಳನ್ನು ದಾಖಲೆಗಳಲ್ಲಿ ನಮೂದಿಸಿದ್ದಲ್ಲಿ. ಅಂತಹ ಹೋಟೆಲ್‌ಗಳ ಸಂಕಷ್ಟ ಹೀಗೆಯೇ ಮುಂದುವರಿಯಲಿದೆ. ಅವರುಗಳು ಹೆಚ್ಚಿನ ಹಣ ತೆತ್ತು ಖಾಸಗಿಯಾಗಿ ಸಿಲಿಂಡರ್‌ಗಳನ್ನು ಖರೀದಿಸಬೇಕಿದೆ.

"ಪೆಟ್ರೋಲ್ ಹಾಗೂ ಡೀಸೆಲ್ ಮಾರಾಟಕ್ಕೆ ಯಾವುದೇ ತೊಂದರೆ ಇಲ್ಲ. ಕಾಲಕಾಲಕ್ಕೆ ಸರಿಯಾಗಿ ಕಂಪನಿಗಳಿಂದ ಬಂಕ್ ಗಳಿಗೆ ಪೆಟ್ರೋಲ್ ಹಾಗೂ ಡೀಸೆಲ್ ಸರಬರಾಜು ಆಗುತ್ತಿದೆ. ಯಾವುದೇ ರೀತಿ ವ್ಯತ್ಯಾಸವಾಗಿಲ್ಲ. ಸಾರ್ವಜನಿಕರು ಯಾವುದೇ ಊಹಾಪೋಹಳಿಗೆ ಕಿವಿಗೊಡದೆ ದಿನನಿತ್ಯದಂತೆ ಪೇಟ್ರೊಲ್ ಹಾಗೂ ಡಿಸೈಲ್ ಹಾಕಿಸಿಕೊಂಡು ಹೋಗಬೇಕು."

■ ಕಾಶೀನಾಥ ಚನವೀರ
ಚಕ್ರೇಶ್ವರಿ ಪೆಟ್ರೋಲ್ ಬಂಕ್ ಮಾಲೀಕ, ಗೋಠೆ

**ಕಾಳಸಂತೆಯಲ್ಲಿ ಮಾರಾಟ?:**




ಕೆಲ ಹೋಟೆಲ್ ಮಾಲೀಕರು ಹೇಳುವಂತೆ ಕೆಲವು ಗ್ಯಾಸ್ ಏಜೆನ್ಸಿಗಳ ಕೆಲಸಗಾರರು ಕಾಳಸಂತೆಯಲ್ಲಿ ಸಿಲಿಂಡರ್‌ಗಳನ್ನು ಮಾರಾಟ ಮಾಡುತ್ತಿದ್ದಾರೆ. ಸಮುದಾಯ ಭವನ, ಆಸ್ಪತ್ರೆ, ಹಾಸ್ಟೆಲ್‌ಗಳ ಹೆಸರಿನಲ್ಲಿ ಸಿಲಿಂಡರ್ ಗಳನ್ನು ಪಡೆದುಕೊಂಡು ಅವುಗಳನ್ನು ಪ್ರತಿಷ್ಠಿತ ಹೋಟೆಲ್‌ಗಳಿಗೆ ಹೆಚ್ಚು ಹಣಕ್ಕೆ ಮಾರಾಟ ಮಾಡುತ್ತಿದ್ದಾರೆ ಎಂಬ ಆರೋಪ ಕೇಳಿಬರುತ್ತಿದೆ. ಈ ಬಗ್ಗೆ ಅಧಿಕಾರಿಗಳು ತನಿಖೆ ನಡೆಸಬೇಕು ಎಂದು ಸಾರ್ವಜನಿಕರು ಒತ್ತಾಯಿಸಿದ್ದಾರೆ.

"ಹೋಟೆಲ್ ಹಾಗೂ ಸೇವಾ ವಲಯದ ಸಂಸ್ಥೆಗಳಿಗೆ ಶೇ.50 ರಷ್ಟು ಸಿಲಿಂಡರ್‌ಗಳನ್ನು ನೀಡಲಾಗುತ್ತದೆ ಎಂದು ಸರ್ಕಾರ ಹೇಳಿದೆ. ಅದರಂತೆ ಅಧಿಕಾರಿಗಳ ಮಟ್ಟದಲ್ಲಿ ಸಭೆ ನಡೆದಿದ್ದು, ಯಾರಿಗೆ ಎಷ್ಟು ಸಿಲಿಂಡರ್ ನೀಡಬೇಕು ಎಂಬುದನ್ನು ಇಲಾಖೆಯ ಅಧಿಕಾರಿಗಳು ನಿರ್ಧರಿಸಲಿದ್ದಾರೆ. ಏ.1ರ ನಂತರ ಸಮಸ್ಯೆ ಬಗೆಹರಿಯಲಿದೆ."

■ ಹೆಸರು ಹೇಳಲಿಚ್ಛಿಸದ ಗ್ಯಾಸ್ ಏಜೆನ್ಸಿಯ ಸಿಬ್ಬಂದಿ

**25 ದಿನಕ್ಕೆ ಇಳಿಕೆ**

ಗ್ರಾಮೀಣ ಭಾಗದ ಗ್ರಾಹಕರಿಗೆ 45 ದಿನಗಳಿಗೆ ಒಮ್ಮೆ ಸಿಲಿಂಡರ್ ನೀಡುವ ನಿಯಮವನ್ನು ತರಲಾಗಿತ್ತು. ಈ ಸಂಬಂಧ ಜನರಿಂದ ವಿರೋಧ ವ್ಯಕ್ತವಾದ ಹಿನ್ನೆಲೆಯಲ್ಲಿ ಗ್ರಾಮೀಣ ಭಾಗದ ಗ್ರಾಹಕರಿಗೂ 25 ದಿನಗಳ ನಂತರ ಸಿಲಿಂಡರ್ ಬುಕಿಂಗ್ ಮಾಡುವ ವ್ಯವಸ್ಥೆಯನ್ನು ಮರು ಜಾರಿಗೆ ತರಲಾಗಿದೆ. ಆದರೆ, ಉಜ್ವಲ ಯೋಜನೆಯಲ್ಲಿ ಸಿಲಿಂಡರ್ ಪಡೆದವರು 45 ದಿನಗಳ ನಂತರವೇ ಸಿಲಿಂಡರ್ ಬುಕ್ ಮಾಡಬೇಕು.

**Printed by:** AVINASH BIDARI, **Published and owned by:** SHAILA INDUSHEKHAR MANUR **Printed at:** ARUN OFFSET PRINTERS,No.23, Sanjaygandhi Nagar, Indi Road, Vijayapura - 586101, Vijayapura Dist., Karnataka. **Published at:** At No.14, Silk City, Near Varasiddi Vinayaka Temple, Atalatti Link Road, Vijayapura -586102, Vijayapura Dist., Karnataka..**Editor :** INDUSHEKHAR MANUR